ಹಿತ್ತಲ ಗಿಡ

ಚಾತುರ್ಮಾಸಿಕ

"ತಳಮಟ್ಟದ ಜನರಿಗೆ ಪ್ರತಿಫಲ
ನೀಡುವಂತಹ ತಂತ್ರಜ್ಞಾನ, ಸಂಸ್ಥೆ
ಮತ್ತು ಮೌಲ್ಯಗಳನ್ನು ಹುಟ್ಟು
ಹಾಕುವತ್ತ ಕೈ ಜೋಡಿಸೋಣ"

ಪೈರು 16, ಕೊಯಿಲು 1 ಮತ್ತು 2, ಜನವರಿ–ಆಗಸ್ಟ್, 2010

ತಳಮಟ್ಟದ ಅನುಶೋಧನೆಗಳನ್ನು ಪ್ರೋತ್ಸಾಹಿಸಿದ ಡಾ॥ ಅಬ್ದುಲ್ ಜೆ. ಕಲಾಂ



ಶ್ರೀನಿವಾಸರ ಪುಟಾಣಿ ಉತ್ಪನ್ನಗಳು



ಈ ಸಂಚಿಕೆಯಲ್ಲಿ

ಅರಳೀಕಟ್ಟೆ, ದೇಶೀಯ ಸಂಸ್ಥೆ	1–1
ದೇಶೀಯ ಹತೋಟಿ	2–3
ದೇಶೀಯ ಜಾಣ್ಮೆ	4–6
ಜೀವ ವೈವಿಧ್ಯ	6
ದೇಶೀಯ ತಂತ್ರಜ್ಞಾನ	7–8
ಅಳಲೇಕಾಯಿ	8
ಪುಣ್ಯಕೋಟಿ	9–10
ಹಿತ್ತಲಗಿಡದ ವ್ಯಕ್ತಿ	11
ಸಾವಯುವ ಕೃಷಿ, ಪ್ರತಿಕ್ರಿಯೆ	11
ನಳಪಾಕ , ಕೂಚುಭಟ್ಟ	12

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ಪಾರಂಪರಿಕ ಆಹಾರ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology, Values & Institutions), Bangalore, **SRISTI** (Society for Research and Initiatives for Sustainable Technologies and Institutions), & **NIF** (National Innovation Foundation, India), Ahmedabad

ಸಂಪಾದಕೀಯ

ಜೀವ ವೈವಿಧ್ಯ ಸಂರಕ್ಷಣೆ ಸೋಲುತ್ತಿರುವುದೆಲ್ಲಿ ?

ಜೀವ ವೈವಿಧ್ಯ ಸಂರಕ್ಷಣೆಗೆ 1992ರ ಅಂತರಾಷ್ಟ್ರೀಯ "ಜೀವ ವೈವಿಧ್ಯ ಒಡಂಬಡಿಕೆ" (Convension on Bio diversity- CBD) ಯಿಂದ ನಮ್ಮ ದೇಶದಲ್ಲಿ 2002 ರಲ್ಲಿ ತಂದಿರುವ **"ರಾಷ್ಟ್ರೀಯ ಜೀವ ವೈವಿಧ್ಯ ಮಸೂದೆ"** ವರೆಗೆ ಹಲವಾರು ನಿಯಮ, ಕಾಯಿದೆ, ಕಾನೂನುಗಳನ್ನು ಹೊರತರಲಾಗಿದೆ. ಆದರೂ ಕೂಡ ಈ ಜೀವ ವೈವಿಧ್ಯ ಸಂರಕ್ಷಣೆಯಾಗುವುದಿರಲಿ ಅಳಿವಿನಂಚಿನಲ್ಲಿರುವ ನೂರಾರು ನಾಟಿತಳಿಗಳು, ಪಕ್ಷಿ, ಪ್ರಾಣಿ, ಮರ, ಗಿಡ, ಕ್ರಿಮಿಕೀಟಾದಿ ಜೀವಜಂತುಗಳನ್ನು ಉಳಿಸಲೂ ಸಾಧ್ಯವಾಗುತ್ತಿಲ್ಲ. ಒಂದು ಲೆಕ್ಕಾಚಾರದ ಪ್ರಕಾರ ಪ್ರತಿ ವರ್ಷ ಸುಮಾರು ಒಂದೂವರೆ ಲಕ್ಷ ಜೀವಿಪ್ರಬೇಧ (species)ಗಳು ನಾಶವಾಗುತ್ತಿದ್ದು ಇದು ಮುಂದುವರಿದಿದ್ದೆ ಆದಲ್ಲಿ 2050 ರ ಹೊತ್ತಿಗೆ ಸುಮಾರು ಶೇ. 30 ರಷ್ಟು ಜೀವಪ್ರಬೇಧಗಳು ನಮ್ಮಿಂದ ಕಣ್ಮರೆಯಾಗುವ ಅಪಾಯವಿರುತ್ತದೆ ಎನ್ನಲಾಗಿದೆ. ನಮ್ಮ ಪಶ್ಚಿಮ ಘಟ್ಟದ ಅರಣ್ಯವಂತೂ ಜನಸಂಖ್ಯಾ ಒತ್ತಡ, ಒತ್ತುವರಿ, ಅಣೆಕಟ್ಟು, ವಿದ್ಯುತ್ ಉತ್ಪಾದನೆಗಳಂತಹ ಅಭಿವೃದ್ಧಿ ಯೋಜನೆಗಳಿಂದ ಈಗಾಗಲೇ ಕ್ಷೀಣಿಸುತ್ತಿದ್ದರೆ, ಜಾಗತಿಕ ತಾಪಮಾನ ಏರುವಿಕೆ (Global Warming)ಯಂತಹ ಪ್ರಾಕೃತಿಕ ವಿಕೋಪದ ಪರಿಣಾಮವಾಗಿ ಮತ್ತಷ್ಟು ನಾಶವಾಗಲಿದೆ ಎಂಬ ಆಘಾತಕಾರಿ ವಿಚಾರ ಈಗ ಬೆಳಕಿಗೆ ಬಂದಿರುತ್ತದೆ. **"ಹವಾಮಾನ ಬದಲಾವಣೆ ಪರಿಣಾಮದ ಅಂದಾಜಿನ ಭಾರತೀಯ ಜಾಲ"** (Indian Network for Climate Change) ಹೊರ ತಂದಿರುವ ಇತ್ತೀಚೆಗಿನ ಒಂದು ವರದಿಯ ಪ್ರಕಾರ 2030ರ ಹೊತ್ತಿಗೆ ನಮ್ಮ ಪಶ್ಚಿಮ ಘಟ್ಟ ಪ್ರದೇಶದ ಉಷ್ಣಾಂಶ ಸುಮಾರು 1.8 ಡಿಗ್ರಿ ಸೆಂಟಿಗ್ರೇಡ್ ಏರಲಿರುವುದರಿಂದ ಹವಾಮಾನ ವೈಪರಿತ್ಯ ಉಂಟಾಗಿ ಐದನೇ ಒಂದರಷ್ಟರ ಪಶ್ಚಿಮಘಟ್ಟಭಾಗ ಪರಿವರ್ತನೆ ಹೊಂದಿ ನಾಶವಾಗುತ್ತದೆ ಎಂದು ತಿಳಿದು ಬಂದಿರುತ್ತದೆ. ಈ ರೀತಿ ಉಷ್ಣಾಂಶದ ಏರುಪೇರಾಗುವುದರಿಂದ ಮಲೇರಿಯಾ, ಪ್ಲೇಗ್‌ಗಳಂತಹ ಕಾಯಿಲೆಗಳು ಅಧಿಕವಾಗುವುದು ಮಾತ್ರವಲ್ಲ ಅಡಿಕೆ, ತೆಂಗು, ಕಾಫಿಗಳಂತಹ ಪ್ಲಾಂಟೇಶನ್ ಬೆಳೆಗಳ ಇಳುವರಿ ಕೂಡ ತೀವ್ರವಾಗಿ ಕುಂಠಿತವಾಗುವುದಾಗಿ ಈ ವರದಿ ತಿಳಿಸಿರುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ, ಜೈವಿಕ ತಂತ್ರಜ್ಞಾನದ ಮೂಲಕ ಮಾರ್ಪಾಡು ಹೊಂದಿರುವ ಸಸ್ಯ, ಜೀವ ಜಂತುಗಳು (Genetically Modified Organism) ಈ ಜೀವ ವೈವಿಧ್ಯದೊಡನೆ ಸೇರುವುದರಿಂದ **'ಜೈವಿಕ ಮಾಲಿನ್ಯ'** ಆಗುವ ಅಪಾಯ ಕೂಡ ಇರುವುದಾಗಿ ತಜ್ಞರು ಕಳವಳ ವ್ಯಕ್ತಪಡಿಸಿರುವರು. ಅಂದಮೇಲೆ, ಮನುಕುಲದ ಉಳಿವಿಗೇ ಅಗತ್ಯವಾಗಿದ್ದು ಅತ್ಯಂತ ಮೂಲಭೂತ ಸಂಪನ್ಮೂಲವಾಗಿರುವ ಈ ಜೀವ ವೈವಿಧ್ಯವನ್ನು ಕಾಪಾಡಿಕೊಳ್ಳಲು ನಾವು ಸೋಲುವಂತಾಗಿರುವ ಕಾರಣಗಳಾದರೂ ಏನೆಂಬುದರತ್ತ ತೀವ್ರ ಗಮನ ಹರಿಸಬೇಕಾಗಿದೆ.

ಈ ಜೀವ ವೈವಿಧ್ಯವೆಂಬುದು, ಸ್ಪಷ್ಟವಾಗಿ ಹೇಳಬೇಕೆಂದರೆ ಒಂದು ನಾಟಿ ತಳಿ ಇರಬಹುದು, ಔಷಧಿ ಸಸ್ಯವಾಗಿರಬಹುದು, ಒಂದು ವಿಶಿಷ್ಠ ಗಿಡ, ಮರ, ಪಕ್ಷಿ, ಹುಲಿ ಸಿಂಹಗಳಂತಹ ಪ್ರಾಣಿ ಸಂಕುಲವಾಗಿರಬಹುದು, ಇವುಗಳ ಸಂರಕ್ಷಣೆ ***'ಯಾರು ಮಾಡಬೇಕು ಯಾರು ಇದರ ಹೊರೆ ಹೋರಬೇಕು, ಯಾರಿಗೆ, ಯಾವಾಗ ಇದರ ಲಾಭ ದೊರೆಯುತ್ತದೆ'*** ಇತ್ಯಾದಿ ಪ್ರಶ್ನೆಗಳ ಬಗ್ಗೆ ಗೊಂದಲಗಳಿದ್ದು ಇವುಗಳಿಗೆ ಸ್ಪಷ್ಟ ಉತ್ತರ ಹುಡುಕಲು ನಾವು ಪ್ರಯತ್ನಿಸದಿರುವುದೇ ಈ ಸಮಸ್ಯೆಗೆ ಮೂಲಕಾರಣವಾಗಿದೆ.

ಇಂದು **'ದುಡ್ಡೆ ದೊಡ್ಡಪ್ಪ'** ನಾಗಿದ್ದು ಸರ್ವವೂ 'ಅರ್ಥ' ಮಯವಾಗಿ ಮಾರುಕಟ್ಟೆಯ ಕದಂಬ ಬಾಹುಗಳು ಬದುಕಿನಾದ್ಯಂತ ಗಟ್ಟಿಯಾಗಿ ಚಾಚಿರುವುದರಿಂದ

ಈ ವ್ಯವಸ್ಥೆಯೊಳಗೆ, ಜೀವವೈವಿಧ್ಯದ ಸ್ಥಾನ, ಮಾನಗಳನ್ನು ನಾವು ಹಣದ ಮೂಲಕವೇ ಅಳೆಯ ಬೇಕಾಗಿರುವುದು ದೊಡ್ಡ ದುರಂತವಾಗಿದೆ. ಈ ಜೀವ ವೈವಿಧ್ಯದಿಂದ **'ಇತರರಿಗೆ'** ಅಧಿಕ ಒಳಿತಾಗುತ್ತದೆಯೆ ಹೊರತು ಅದರ ನೈಜ ಸಂರಕ್ಷಕರಿಗೆ ಪ್ರತಿಫಲ ಅಷ್ಟೇನೂ ದೊರೆಯದಾಗಿದೆ. ಉದಾಹರಣೆಗೆ ನಾಟಿ ತಳಿ ಭತ್ತ, ಟೊಮೆಟೊ ಅಥವಾ ನಾಟಿ ಕೋಳಿ ಅಥವಾ ಮೊಟ್ಟೆ ಇವುಗಳ ರುಚಿ ಹೇಳತೀರದಾಗಿದ್ದು, ಅದನ್ನು ಅನುಭೋಗಿಸುವವರಿಗೆ ಅಧಿಕ ತೃಪ್ತಿ ತರುತ್ತದೆಯೇ ಹೊರತು, ಅದನ್ನು ಬೆಳೆದು, ಸಂರಕ್ಷಿಸಿರುವವರಿಗಲ್ಲ. ಮುಖ್ಯವಾಗಿ, ಈ ಜೀವ ವೈವಿಧ್ಯದ ಭವಿಷ್ಯ ಮೌಲ್ಯ (Option value) ಅಧಿಕವಾಗಿದ್ದರಿಂದ ಇಂದಿನ ತಲೆಮಾರಿಗಿಂತ **'ಮುಂದಿನ ತಲೆಮಾರು'** ಗಳಿಗೆ ಇವು ಹೆಚ್ಚು ಒಳಿತು ತರುತ್ತವೆ ಎನ್ನಲಾಗಿದೆ. ಉದಾಹರಣೆಗೆ ಒಂದು ನಾಟಿ ತಳಿಯಿಂದ ಮುಂದೆ ಹೊಸ ಹೊಸ ತಳಿಗಳ ಸಂಕರಣ ಮಾಡಬಹುದು. ಹಾಗೇ, ಇಂದು ಕಂಡು ಕೇಳರಿಯದ ಸಹಸ್ರಾರು ಔಷಧಿ ಸಸ್ಯಗಳಂತೂ ಮುಂದಿನ ತಲೆಮಾರಿನ ಹೊಸ ಹೊಸ ಕಾಯಿಲೆಗಳಿಗೆ ಪರಿಹಾರ ನೀಡಬಹುದಾಗಿವೆ. ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣ ನೈಸರ್ಗಿಕ ಕಾಡಂತೂ ಮಾನವರಿಗಿಂತ ಮಿಗಿಲಾಗಿ ಪ್ರಾಣಿ, ಪಕ್ಷಿ, ಕ್ರಿಮಿ ಕೀಟಾದಿ ಸಹಸ್ರಾರು **'ಮಾನವ ರೇತರ'**(Non human) ಜೀವಜಂತುಗಳಿಗೆ ಆಶ್ರಯ ನೀಡಿ ಜೀವನ ಭದ್ರತೆ ನೀಡುತ್ತಿದೆ.

ಆದರೆ, ಇತರರಿಗೆ, ಮುಂದಿನ ಪೀಳಿಗೆಗೆ ಮತ್ತು ಮಾನವರೇತರ ಜೀವಿಗಳ ಹಿತಕಾಯುವ ಕಾಯಕಕ್ಕೆ ಪ್ರೋತ್ಸಾಹ, ಪ್ರತಿಫಲ ಸಿಗುವಂತೆ ಮಾಡುವ ವ್ಯವಸ್ಥೆ ನಮ್ಮಲ್ಲಿದೆಯೆ? ಸಧ್ಯದ ಆರ್ಥಿಕ ನಿಯಮಗಳು, ಮಾರುಕಟ್ಟೆ ವ್ಯವಸ್ಥೆಯಂತೂ ಸಂಪೂರ್ಣ **'ಮಾನವ ಕೇಂದ್ರಿತ'**(Anthropo centric) ವಾಗಿದ್ದು **'ನನಗೆ' 'ಈವತ್ತಿಗೆ'** ಏನು ಸಿಗುತ್ತೆ ಎನ್ನುವುದರತ್ತ ಗಮನ ಹರಿಸುವುದಕ್ಕೆ ಮಾತ್ರ ಒತ್ತು ಕೊಡುತ್ತಲಿವೆ. ಅಂದಮೇಲೆ, ಈ ವಾತಾವರಣದಲ್ಲಿ ಜೀವವೈವಿಧ್ಯ ಸಂರಕ್ಷಣೆಯಾದರೂ ಹೇಗೆ ಸಾಧ್ಯ? ಈ ಮೂಲಭೂತ ವಿಚಾರಗಳತ್ತ ಗಮನ ಹರಿಸದಿರುವುದರಿಂದ ಜೀವವೈವಿಧ್ಯದ ಮೇಲಿನ ಒಡಂಬಡಿಕೆ, ನೀತಿ, ನಿಯಮಗಳೆಲ್ಲಾ ಇಂದು ಪರಿಣಾಮಕಾರಿಯಾಗದೆ ಸೋಲುತ್ತಿವೆ. ಇದಕ್ಕೆ ಪರಿಹಾರ ಹುಡುಕಲು ನಮ್ಮ ಚಿಂತನೆ, ತಾತ್ವಿಕ ನಿಲುವುಗಳಲ್ಲೇ ಬದಲಾವಣೆ ತರುವುದರತ್ತ ಗಮನ ಹರಿಸುವುದು ಇಂದು ಅಗತ್ಯವಾಗಿದೆ.

ಡಾ|| ಪ್ರಕಾಶ್ ಕಮ್ಮರಡಿ

* * * * *

ಅರಳೀಕಟ್ಟೆ

ಜೀವ ವೈವಿಧ್ಯ ರಕ್ಷಣೆಯತ್ತ ಕೆಲ ಕಾನೂನುಗಳು

ಆಧುನಿಕ ಜೈವಿಕ ತಂತ್ರಜ್ಞಾನದ ಮುಖೇನ ಮಾರ್ಪಾಟುಗೊಂಡ ಸಸ್ಯ, ಜೀವಿಗಳಿಂದ ಜೀವ ವೈವಿಧ್ಯದ ಮೇಲಾಗಬಹುದಾದ ದುಷ್ಪರಿಣಾಮ ತಡೆಯಲು ಮುಂಜಾಗ್ರತ ಕ್ರಮವಾಗಿ 'ಜೀವ ವೈವಿಧ್ಯ ಒಡಂಬಡಿಕೆ' (CBD) ಅಡಿಯಲ್ಲಿ **"ಜೈವಿಕ ಸುರಕ್ಷತೆಗಾಗಿ ಕಾರ್ಟಾಜಿನ ಕರಡುಪ್ರತಿ"** (Cartagena Protocol in Biosafety) ಒಂದನ್ನು ಹೊರತರಲಾಗಿದ್ದು ಇದಕ್ಕೆ 159 ರಾಷ್ಟ್ರಗಳು ಸಹಿಹಾಕಿವೆ. ಇತ್ತೀಚೆಗೆ ಜಪಾನಿನ ನಗೋಯದಲ್ಲಿ ಜರುಗಿದ ಮಹಾ ಸಮ್ಮೇಳನದಲ್ಲಿ ಈ ಕರಡು ಪ್ರತಿಗೆ ಮತ್ತಷ್ಟು ಬಲತರಲು ಹಲವಾರು ಅಂತರಾಷ್ಟ್ರೀಯ ರೀತಿ, ರಿವಾಜು, ಕಾನೂನುಗಳನ್ನು ರೂಪಿಸಲಾಗಿರುತ್ತದೆ. ಇದು ಸ್ಥಳೀಯವಾಗಿ ಕಟ್ಟುನಿಟ್ಟಾಗಿ ಜಾರಿಗೆ ಬಂದಿದ್ದೆ ಆದಲ್ಲಿ ಜೈವಿಕ ತಂತ್ರಜ್ಞಾನದಿಂದ ಜೀವ ವೈವಿಧ್ಯಕ್ಕೆ ಗಂಡಾಂತರ ಬರಲಿದೆ ಎನ್ನುವ ಭಯ ಸ್ವಲ್ಪ ದೂರವಾಗುತ್ತದೆ.

ಮಳೆ ತರುವ ಹಕ್ಕಿ

ಚಾತಕ ಪಕ್ಷಿ ಯಾರಿಗೆ ಗೊತ್ತಿಲ್ಲ! ನಮ್ಮ ಎಲ್ಲ ಜನಪದ ಕತೆಗಳಲ್ಲಿ, ಪುರಾಣಗಳಲ್ಲಿ ಚಾತಕ ಪಕ್ಷಿಯ ಉಲ್ಲೇಖವಿದ್ದೇ ಇರುತ್ತದೆ. ಅವನು ಚಾತಕ ಹಕ್ಕಿಯಂತೆ ಕಾಯುತ್ತಿದ್ದನು ಎನ್ನುವಂತಹ ಉಪಮೆಗಳನ್ನು ಕತೆಗಳಲ್ಲಿ ಕೇಳಿಯೇ ಇರುತ್ತೇವೆ. ಕಾಳಿದಾಸನ ಮೇಘದೂತ ಕಾವ್ಯದಲ್ಲೂ ಇದರ ಉಲ್ಲೇಖವಿದೆ. ಜನರ ನಂಬಿಕೆಯ ಪ್ರಕಾರ, ಚಾತಕ ಪಕ್ಷಿ ನೀರು ಕುಡಿಯಲು ಮಳೆಯ ನೀರಿಗಾಗಿ ಬಹಳ ಹತಾಶೆ ಯಿಂದ ಕಾಯುತ್ತಿರುತ್ತದಂತೆ. ಅದು ಕುಡಿಯುವುದು ಮಳೆಯ ನೀರನ್ನು ಮಾತ್ರ. ಮಳೆ ಹುಯ್ಯುತ್ತಿರುವಾಗ ತಲೆಯೆತ್ತಿ, ಕೊಕ್ಕು ತೆಗೆದು ಮಳೆಯ ನೀರನ್ನು ಕುಡಿಯುತ್ತದಂತೆ. ಬೇಸಿಗೆಯಲ್ಲಿ ಅದು ಕಾಣಸಿಕ್ಕರೆ ಅಥವಾ ಅದರ ಇಂಪಾದ ಹಾಡು ಕೇಳಿಸಿದರೆ, ಅದು ಮುಂಗಾರು ಮಳೆ ಬರುವ ಸೂಚನೆಯಂತೆ. ? ಹಾಗಾಗಿ ಹಲವಾರು ಪಕ್ಷಿ ವೀಕ್ಷಕರು ಈ ಪಕ್ಷಿಯ ನಡವಳಿಕೆ ಮತ್ತು ಜೀವನ ಕ್ರಮದ ಬಗ್ಗೆ ಎರಡು ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದಾರೆ.

ಈ ಅಧ್ಯಯನದ ಪ್ರಕಾರ ಈ ಹಕ್ಕಿ ಆಫ್ರಿಕಾದಿಂದ ಬೇಸಿಗೆಯಲ್ಲಿ ನಮ್ಮ ದೇಶಕ್ಕೆ ವಲಸೆ ಬರುವ ಹಕ್ಕಿ ಎಂದು ಗೊತ್ತಾಗಿದೆ. ಮುಂಗಾರು ಮಳೆ ಶುರುವಾಗುವ ಸ್ವಲ್ಪ ದಿನಗಳ ಮೊದಲು ಪೂರ್ವ ಆಫ್ರಿಕಾದಿಂದ ನಮ್ಮ ಪಶ್ಚಿಮ ಘಟ್ಟಗಳಿಗೆ ವಲಸೆ ಬಂದು, ಕೆಲದಿನಗಳು ಅಲ್ಲಿಯೇ ಇದ್ದು ದೀರ್ಘ ಪ್ರಯಾಣದ ಆಯಾಸದಿಂದ ಚೇತರಿಸಿ ಕೊಂಡು ನಂತರ ದೇಶದ ವಿವಿಧ ಪ್ರದೇಶಗಳಿಗೆ ಹೋಗುತ್ತದೆ ಎಂದು ಕಂಡು ಬಂದಿದೆ. ದೂರದ ಪಂಜಾಬ್, ಗುಜರಾತ್, ಉತ್ತರಪ್ರದೇಶ, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಲ್ಲಿ ಕೂಡ ಈ ಹಕ್ಕಿ ಕಾಣಿಸಿಕೊಂಡಿದೆ. ಸ್ಥಳೀಯವಾಗಿ ಇದನ್ನು ಚೊಟ್ಟಿಕೋಗಿಲೆ ಅಥವಾ ಕರಿಜುಟ್ಟ ಅಥವಾ ಮಳೆಕೋಗಿಲೆ ಎಂದು ಕರೆಯುತ್ತಾರೆ. ಆಕಾರದಲ್ಲಿ ಕೋಗಿಲೆಗಿಂತ ಸ್ವಲ್ಪ ಚಿಕ್ಕದಾಗಿದ್ದು, ಕಪ್ಪು ಬಿಳಿ ಪಕ್ಷಿ. ನೆತ್ತಿಯ ಮೇಲೆ ಕೆದರಿದಂತಹ ಕಪ್ಪು ಜುಟ್ಟು.




ಈ ಹಕ್ಕಿ ನಮ್ಮ ದೇಶಕ್ಕೆ ವಲಸೆ ಬರುವುದು ಮೊಟ್ಟೆಯಿಟ್ಟು ಮರಿ ಮಾಡುವುದಕ್ಕೆ. ಮುಂಗಾರು ಮಳೆ ಶುರುವಾಗುವುದಕ್ಕೆ ಮುನ್ನ ಸ್ವಲ್ಪ ದಿನಗಳ ಮೊದಲು ನಮ್ಮಲ್ಲಿ ಕಾಣಿಸಿಕೊಳ್ಳುವುದು ಬಹು ಆಶ್ಚರ್ಯಕರ. ಒಂದು ಊಹೆಯ ಪ್ರಕಾರ, ಈ ಹಕ್ಕಿ ಆಫ್ರಿಕಾ ಖಂಡದಿಂದ ಬೀಸುವ ಮುಂಗಾರು ಮಳೆ ತರುವ ಸಾಗರ ಮಾರುತದ (*somali jet*) ಸಹಾಯದಿಂದ, ಸಾಗರವನ್ನು ಸುಲಭವಾಗಿ ದಾಟಿ ನಮ್ಮ ದೇಶಕ್ಕೆ ಬರುತ್ತದೆ. ಹಾಗಾಗಿ, ಮಳೆ ಗಾಳಿಯ ಸಹಾಯದಿಂದಲೇ ಇಲ್ಲಿಗೆ ಬರುವ ಹಕ್ಕಿಯಾದ್ದರಿಂದ, ಮಳೆಗೆ ಮೊದಲು ಇಲ್ಲಿ ಕಾಣಿಸಿಕೊಂಡು ಮಳೆಯ ಸೂಚನೆಯನ್ನು ಕೊಡುತ್ತದೆ.

ಇನ್ನೊಂದು ಆಶ್ಚರ್ಯವೆಂದರೆ ಕೋಗಿಲೆಯಂತೆ ಈ ಹಕ್ಕಿಯೂ ಪರಾವಲಂಬಿ ಹಕ್ಕಿ. ತನ್ನ ಮೊಟ್ಟೆಗಳನ್ನು ಅದು ಗೀಜಗಾರ್ಲು (*Babbler*) ಹಕ್ಕಿಯ ಗೂಡಿನಲ್ಲಿ ಇಟ್ಟು ಮರಿ ಮಾಡುತ್ತದೆ. ಈ ಹಕ್ಕಿಯ ವಿವರ ಮತ್ತು ಜೀವನ ಕ್ರಮವನ್ನು ಕರಾರುವಕ್ಕಾಗಿ ತಿಳಿಯಲು ಹಲವಾರು ವರ್ಷಗಳ ಅಧ್ಯಯನದ ಅವಶ್ಯಕತೆಯಿದೆ ಎನ್ನುವುದು ಪಕ್ಷಿ ವಿಜ್ಞಾನಿಗಳ ಅಭಿಪ್ರಾಯ. ಸಾಮಾನ್ಯ ಜನರ ಅಥವಾ ಸಮುದಾಯಗಳ ಇಂತಹ ಅನೇಕ ನಂಬಿಕೆಗಳ ಮತ್ತು ನೆನವರಿಕೆಗಳ ಹಿಂದೆ ವೈಜ್ಞಾನಿಕ ಅಧ್ಯಯನ ಮಾಡಿ ಸತ್ಯವನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ.

-ಜಿ. ವಿ. ಸುಂದರ್

ಬೀಜಗಳ ಸಂರಕ್ಷಣೆ

ತಮಿಳುನಾಡಿನ, ತ್ರಿಚಿ ಜಿಲ್ಲೆಯ ರೈತರಾದ ಕೃಷ್ಣನ್, ರಾಮಸ್ವಾಮಿ ಮತ್ತು ಎಂ.ಪೆರುಮ್ಮಾಳ್‌ರವರು ನೈಸರ್ಗಿಕ ವಿಧಾನದಿಂದ ಬೀಜಗಳನ್ನು ಸಂರಕ್ಷಣೆ ಮಾಡುತ್ತಾರೆ. ಕೃಷ್ಣನ್ ಮತ್ತು ರಾಮಸ್ವಾಮಿಯವರು ದ್ವಿದಳ ಧಾನ್ಯವಾದ ತೊಗರಿಬೇಳೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ನಂತರ ಗೆದ್ದಲು ಹುತ್ತದ ಮಣ್ಣಿನ ಕೆಸರನ್ನು ಲೇಪಿಸುತ್ತಾರೆ. ಈ ವಿಧಾನವು ಶೇಖರಣೆ ಮಾಡಿರುವಂತಹ ಕಾಳುಗಳಿಗೆ ಹುಳುಗಳು ಬೀಳುವುದನ್ನು ತಡೆಹಿಡಿಯುತ್ತದೆ. ಅಲ್ಲದೆ ಕೆಲವು ಹಳ್ಳಿಗಳಲ್ಲಿ ರೈತರು ಧಾನ್ಯಗಳನ್ನು ಸಂಗ್ರಹಿಸಿಡುವ ಮೊದಲು ಹರಳೆಣ್ಣೆ ಮತ್ತು ಅರಿಶಿನವನ್ನು ಮಿಶ್ರಣ ಮಾಡುತ್ತಾರೆ ಎಂದು ಕೃಷ್ಣನ್ ಹೇಳಿದ್ದಾರೆ. ಈ ರೀತಿಯಾಗಿ ಧಾನ್ಯಗಳು ಹುಳ ಬೀಳದೇ ಇರುವ ಹಾಗೆ ಒಂದು ವರ್ಷದವರೆಗೂ ಶೇಖರಿಸಿಡಬಹುದಂತೆ. ಹಾಗೇ, ಪೆರುಮ್ಮಾಳ್‌ರವರು ನಾಯಿ ತುಳಸಿ (*Ocimum canum Sim*) ಎಲೆಗಳನ್ನೂ ಧಾನ್ಯಗಳ ಜೊತೆಯಲ್ಲಿ ಮಿಶ್ರಣ ಮಾಡಿ ಅವು ಕೆಡದಂತೆ ಸಂಗ್ರಹಿಸುತ್ತಾರೆ.



ಕಾಸರ್ಕದ ಗೊಬ್ಬರ

ತಮಿಳುನಾಡಿನ, ತ್ರಿಚಿ ಜಿಲ್ಲೆಯ ಆರ್.ಶೇಖರ್ ಮತ್ತು ರಮರ್‌ರವರು ಭತ್ತದ ಹೆಚ್ಚಿನ ಇಳುವರಿಗೆ ಕಾಸರ್ಕ ಮರದ (*Strychnos nux vomica L.*) ಉದುರಿದ ಎಲೆಗಳನ್ನು ಉಪಯೋಗಿಸಿಕೊಂಡು ಗೊಬ್ಬರವನ್ನು ತಯಾರಿಸುತ್ತಾರೆ. ಇದಕ್ಕಾಗಿ ಆರು ಅಡಿ ಆಳವಿರುವ ಗುಂಡಿ ತೋಡಿ ಅದರಲ್ಲಿ ಕಾಸರ್ಕದ, ಲಾಂಟಾನಾ (*Lantana camara L.*) ಹಾಗೂ ಹೊಂಗೆ (*Pongamia pinnata (L.) Pierre*) ಗಿಡಗಳ ಎಲೆಗಳನ್ನು ತುಂಬಿಸಿ ಪದರ ಪದರವಾಗಿ ಸಗಣಿಯ ರಾಡಿಯನ್ನು ಹಾಕುತ್ತಾರೆ. ಆರು ಅಥವಾ 10 ತಿಂಗಳಾದ ಮೇಲೆ ತಯಾರಾಗುವ ಉತ್ಕೃಷ್ಟವಾದ ಗೊಬ್ಬರವನ್ನು ಮಳೆಯಾಶ್ರಿತವಾಗಿ ಬೆಳೆಯುವ ಭತ್ತ ಅಥವಾ ರಾಗಿ ಬೆಳೆಗಳಿಗೆ ಉಪಯೋಗಿಸುತ್ತಾರೆ. ಗೊಬ್ಬರದಲ್ಲಿ ಕಾಸರ್ಕದ ಎಲೆಗಳನ್ನು ಬಳಸುವುದರಿಂದ ಭತ್ತದ ಸುವಾಸನೆಯು ಹೆಚ್ಚಾಗುತ್ತದೆಂದು ನಂಬಲಾಗಿದೆ.

ವೈಜ್ಞಾನಿಕ ಹಿನ್ನೆಲೆ : ಕಹಿಗುಣವಿರುವ ಕಾಸರ್ಕವನ್ನು ಸಾವಯವ ಗೊಬ್ಬರ ತಯಾರಿಸಲು ಉಪಯೋಗಿಸುವುದರಿಂದ ಇಲಿಗಳ ಹಾಗೂ ಗೆದ್ದಲು ಹುಳುಗಳ ಉಪಟಳ ಕಡಿಮೆಯಾಗುತ್ತದೆ. ವಿವರಕ್ಕೆ http://www.treesftf.org/resources/infomaterials ನೋಡಿರಿ. ಹೊಂಗೆಯನ್ನು ಹಸಿರು ಗೊಬ್ಬರವಾಗಿ ಉಪಯೋಗಿಸಲಾಗುತ್ತಿದೆ. ವಿವರಕ್ಕೆ www.microbiologyprocedure.com ನೋಡಿರಿ. ಸಾವಯವ ಗೊಬ್ಬರಗಳಲ್ಲಿ ಲಾಂಟಾನಾದಿಂದ ತಯಾರಿಸಲಾದ ಎರೆಗೊಬ್ಬರವು ಹೆಚ್ಚು ಉತ್ಕೃಷ್ಟವಾಗಿದ್ದು ಇಳುವರಿಯನ್ನು ಹೆಚ್ಚಿಸುತ್ತದೆ. ವಿವರಕ್ಕೆ http://www.indianjournals.com ನೋಡಿರಿ. ಹಾಗೇ ಹನಿ ಬೀ ಸಂಚಿಕೆ 11(2):10, 2000; ಮತ್ತು 15(2):16, 2004 ರನ್ನೂ ನೋಡಬಹುದು.

ಹರಳು ಬೆಳೆ ರೋಗಗಳಿಗೆ ವಿಷ ಉಮ್ಮತ್ತಿ

ಗುಜರಾತ್ ರಾಜ್ಯದ, ವಡೋದರ ಜಿಲ್ಲೆಯ ಮೋಹನ್‌ಭಾಯಿ ಶಾನಭಾಯಿ ಪಟೇಲ್‌ರವರು ಔಡಲ (ಹರಳು) ಗಿಡಗಳಿಗೆ ಬರುವಂತಹ ರೋಗಗಳಿಗೆ ವಿಷ ಉಮ್ಮತ್ತಿ (*Datura metel L.*) ಗಿಡದ ಉಪಯೋಗವನ್ನು ಮಾಡುತ್ತಾರೆ. ಔಡಲ ಬೆಳೆಯು ಯಾವಾಗಲೂ ಒಂದಲ್ಲ ಒಂದು ರೀತಿಯ ರೋಗದ ಬಾಧೆಗೆ ಒಳಪಟ್ಟು ಇದರಿಂದ ಗಿಡವು ಸುರುಟಿಕೊಳ್ಳುತ್ತದೆ ಅಥವಾ ಕಮರಿ ಹೋಗುತ್ತದೆ. ಸಾಮಾನ್ಯವಾಗಿ ರೈತರು ತಮ್ಮ ಹೊಲಗಳಲ್ಲಿ ಪ್ರತಿ ವರ್ಷವೂ ಒಂದೇ ತರಹದ ಬೆಳೆಗಳನ್ನು ಬೆಳೆದಾಗ ಈ ರೀತಿ ರೋಗಗಳ ಬಾಧೆಗೆ ಒಳಗಾಗುತ್ತವೆ. ಇವರ ಪ್ರಕಾರ ವಿಷ ಉಮ್ಮತ್ತಿ ಬೀಜಗಳನ್ನು ಇದೇ ಗಿಡದ ಎಲೆಗಳ ರಸದಲ್ಲಿ ನೆನೆಸಿ ನಂತರ 24 ಗಂಟೆ ನೆರಳಿನಲ್ಲಿ ಒಣಗಿಸಬೇಕು. ಈ ರೀತಿ ಒಣಗಿಸಿರುವ ಬೀಜಗಳನ್ನು ಪುಡಿಮಾಡಿ ಉಪಯೋಗಿಸುವುದರಿಂದ ಔಡಲ ಗಿಡಗಳು ಆರೋಗ್ಯವಾಗಿ ಮತ್ತು ಬೇಗ ಬೆಳೆಯುತ್ತವೆ ಅಲ್ಲದೆ ಬೇರೆ ರೋಗಗಳು ಬರುವುದನ್ನೂ ನಿಯಂತ್ರಿಸುತ್ತದೆ ಎಂದು ಹೇಳಿದ್ದಾರೆ. ಈ ವಿಧಾನವನ್ನು ತಮ್ಮ ಹಿರಿಯವರಿಂದ ಕಲಿತಿದ್ದು, ಹಳ್ಳಿಯಲ್ಲಿ ಕೆಲವರಿಗೆ ಮಾತ್ರ ಇದು ತಿಳಿದಿರುವುದಾಗಿ ಹೇಳಿದ್ದಾರೆ.

ವೈಜ್ಞಾನಿಕ ಹಿನ್ನೆಲೆ: ಕಡಲೆ (*chickpea*) ಗಿಡಗಳಲ್ಲಿ ಕಾಣಿಸಿಕೊಳ್ಳುವ ರೋಗಗಳು ಸಾಮಾನ್ಯವಾಗಿ ಒಂದು ಜಾತಿಯ (*Ascochyta rabiei*) ಶಿಲೀಂದ್ರದಿಂದ ಬರುತ್ತದೆ. ವಿಷ ಉಮ್ಮತ್ತಿಯನ್ನು ಪ್ರಾಯೋಗಿಕವಾಗಿ ಇದರ ಮೇಲೆ ಬಳಸಿ ನೋಡಿದಾಗ ಶಿಲೀಂದ್ರದ ಬೆಳವಣಿಗೆ ಶೇಕಡಾ 28-34 ಮತ್ತು ಶೇಕಡಾ 23-41 ರಷ್ಟು ಕಡಿಮೆಯಾಗಿರುವುದು ಕಂಡುಬಂದಿದೆ. ವಿವರಕ್ಕೆ Shafique S. (2008); Mycopath Volume 6(1&2): Pages 31-35 ನೋಡಿರಿ. ಹಾಗೂ ಹನಿ ಬೀ ಸಂಚಿಕೆ 13(3): 1, 2002 ರಲ್ಲಿ ಇದರ ಬಗ್ಗೆ ಕೊಡಲಾಗಿದೆ

ಥ್ರಿಪ್ಸ್ ಬಾಧೆಗೆ ತಂಬಾಕಿನ ಪುಡಿ

ಗುಜರಾತ್ ರಾಜ್ಯದ, ಜಮ್‌ನಗರ್ ಜಿಲ್ಲೆಯ ಅಜಯ್‌ಭಾಯಿ ನರನ್‌ಭಾಯಿಯವರು ಥ್ರಿಪ್ಸ್ ಬಾಧೆಗೆ ಪರಿಹಾರವನ್ನು ಕಂಡುಹಿಡಿದಿದ್ದಾರೆ. ಈರುಳ್ಳಿ ಬೆಳೆಯು ಥ್ರಿಪ್ಸ್ ಬಾಧೆಗೇನಾದರೂ ಒಳಗಾದರೆ ಅದರ ಬೆಳವಣಿಗೆಯು ಕುಂಠಿತಗೊಂಡು, ಇಳುವರಿಯು ಗಣನೀಯವಾಗಿ ಇಳಿಮುಖವಾಗುತ್ತದೆ. ಇದಕ್ಕೆ ಪರಿಹಾರವಾಗಿ ಅಜಯ್‌ಭಾಯಿಯವರು 5ಕೆ.ಜಿ. ತಂಬಾಕಿನ ಪುಡಿಯನ್ನು (ನಸ್ಯಪುಡಿ) 15 ಲೀಟರ್ ನೀರಿನಲ್ಲಿ ಚೆನ್ನಾಗಿ ಮಿಶ್ರಣಮಾಡಿಕೊಳ್ಳುತ್ತಾರೆ. ಇಂತಹ 500ಮಿ.ಲೀ. ಮಿಶ್ರಣಕ್ಕೆ 15 ಲೀ. ನೀರನ್ನು ಮಿಶ್ರಣಮಾಡಿ ಬೆಳೆಗೆ ಸಿಂಪಡಿಸುತ್ತಾರೆ. ಹೀಗೆ ಮೊದಲನೇ ಬಾರಿಗೆ ಮಾಡಿದ ಸಿಂಪಡಣೆಯಿಂದ ಶೇಕಡಾ 50ರಷ್ಟು ಥ್ರಿಪ್ಸ್ ಬಾಧೆ ಕಡಿಮೆಯಾಗುವುದಲ್ಲದೇ ಎರಡನೇ ಬಾರಿಯ ಸಿಂಪಡಣೆಯಿಂದ ಶೇಕಡಾ 80 ರಿಂದ 90 ರಷ್ಟು ಬಾಧೆ ಕಡಿಮೆಯಾಗುತ್ತದೆಯೆಂದು ಅಜಯ್‌ಭಾಯಿ ಹೇಳಿದ್ದಾರೆ. ಈ ವಿಧಾನವನ್ನು ನೆರೆಯ ಹಳ್ಳಿಯವರಿಂದ ಕಲಿತಿದ್ದು ತಮ್ಮ ಹೊಲದಲ್ಲೇ ಇದನ್ನು ಪ್ರಯೋಗಿಸಿ ನೋಡಿದ್ದಾರೆ.

ವೈಜ್ಞಾನಿಕ ಹಿನ್ನೆಲೆ : ತಂಬಾಕನ್ನು ಈ ಹಿಂದೆ ಥ್ರಿಪ್ಸ್ ಬಾಧೆಯ ಪರಿಹಾರಕ್ಕೆ ಉಪಯೋಗಿಸಲಾಗಿರುತ್ತದೆ. ವಿವರಕ್ಕೆ Horowitz, A.R.& Ishaaya, I.(Editors) 2004; Insect Pest Management in Field and Protected Crops. Springer, Berlin-Heidelberg-New York:344 ನೋಡಿರಿ. ಹಾಗೂ ಹನಿ ಬೀ ಸಂಚಿಕೆ 5 (4):13-14,1994 ರಲ್ಲೂ ನೋಡಬಹುದು.

ಮೂಲ: *Honey Bee Vol 20(2) April - June 2009*

ರಸ ಹೀರುವ ಉಪದ್ರವಿಗಳಿಗೆ

ಗುಜರಾತಿನ, ಬನಸ್ಕಾಂತ ಜಿಲ್ಲೆಯವರಾದ ಪುರುಷೋತ್ತಮ್ ಭಾಯಿಯವರು ಬೆಳೆಗಳಲ್ಲಿ ಕಾಣಿಸುವಂತಹ ಉಪದ್ರವಿಗಳ ನಾಶಕ್ಕೆ ಬೇವಿನ ಎಲೆಗಳನ್ನು ಮಜ್ಜಿಗೆಯೊಂದಿಗೆ ಬೆರೆಸಿ ಉಪಯೋಗಿಸುತ್ತಾರೆ. ಇದಕ್ಕಾಗಿ ಅವರು ಕಡೆದಿರುವಂತಹ ಮಜ್ಜಿಗೆಯನ್ನು ಸಂಗ್ರಹಿಸಿಕೊಳ್ಳುತ್ತಾರೆ. ನಂತರ ಬೇವಿನ ಎಲೆಗಳಿಂದ ತೆಗೆದಿರುವ ಕಷಾಯವನ್ನು 200 ಮಿ.ಲೀ ತೆಗೆದುಕೊಂಡು ಅದನ್ನು ಕಾಲು ಭಾಗ ಬರುವವರೆಗೂ ಕುದಿಸುತ್ತಾರೆ. ಇದನ್ನು 1500 ಮಿ.ಲೀ ಮಜ್ಜಿಗೆಯಲ್ಲಿ ವಿಶ್ರಣಮಾಡಿ ಬೆಳೆಗಳಿಗೆ ಸಿಂಪಡಿಸುತ್ತಾರೆ.

ವೈಜ್ಞಾನಿಕ ಹಿನ್ನೆಲೆ: 1:5 ರ ಪ್ರಮಾಣದಲ್ಲಿ ಮಿಶ್ರಣಮಾಡಿರುವಂತಹ ನೀರು ಮತ್ತು ಮಜ್ಜಿಗೆಯು ಬೆಳೆಗಳಲ್ಲಿ ಕಾಣಿಸಿಕೊಳ್ಳುವ ರಸ ಹೀರುವ ಉಪದ್ರವಿಗಳ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ ಎಂಬುದಾಗಿ ಈಗಾಗಲೇ ದಾಖಲಾಗಿರುತ್ತದೆ. ವಿವರಕ್ಕೆ Honey Bee, 14(1) March, 2003 ರಲ್ಲಿಯೂ ನೋಡಬಹುದು.

ಬೆಳ್ಳುಳ್ಳಿಯ ರೋಗಗಳಿಗೆ ಸಜ್ಜೆ ಮತ್ತು ಹರಳೆಣ್ಣೆ!

ಭಾರತದ ಸಂಭಾರ ಮಂಡಳಿಯ ಪ್ರಕಾರ ಬೆಳ್ಳುಳ್ಳಿಯ ಉತ್ಪಾದನೆಯು ಗುಜರಾತಿನ ಜುನಾಗಡ್ ಜಿಲ್ಲೆಯಲ್ಲಿ ಹೆಚ್ಚಿರುವುದು ಕಂಡು ಬಂದಿದೆ. ಇಲ್ಲಿಯ ರೈತರು ಬೆಳೆಗಳಲ್ಲಿಯ ರೋಗಗಳ ಹತೋಟಿಗೆ ರಸಾಯನಿಕಗಳನ್ನು ಬಳಸದೇ ತಮ್ಮದೇ ಆದಂತಹ ದೇಶೀಯ ಕ್ರಮಗಳನ್ನು ಅನುಸರಿಸುತ್ತಿದ್ದಾರೆ.

ಈ ಮೇಲೆ ತಿಳಿಸಿದಂತೆ ಪುರುಷೋತ್ತಮ್ ಭಾಯಿಯವರು ತಮ್ಮ ಬೆಳ್ಳುಳ್ಳಿಯ ಬೆಳೆಗೆ ಮಜ್ಜಿಗೆ, ಗೋಮೂತ್ರ ಮತ್ತು ತುಂಬಾ ಹಳೆಯ ಕಮಟುನಾತದ ಸಜ್ಜೆಯ (*Pennisetum typhoides. Burm*) ಹಿಟ್ಟನ್ನು ಮಿಶ್ರಣ ಮಾಡಿಕೊಂಡು ಬಳಸುತ್ತಾರೆ. ಬೆಳ್ಳುಳ್ಳಿ ಬೆಳೆಯಲ್ಲಿ ರೋಗವು ಕಾಣಿಸಿಕೊಂಡಾಗ ಅಥವಾ ಉಪದ್ರವಿಗಳ ಹಾವಳಿ ಹೆಚ್ಚಾದಾಗ ಈ ಮಿಶ್ರಣವನ್ನು ಸಿಂಪಡಿಸಿದಲ್ಲಿ ಪರಿಣಾಮಕಾರಿಯಾಗಿ ಹತೋಟಿಯಾಗುತ್ತದೆಂದು ಹೇಳಿದ್ದಾರೆ.

ಇದೇ ರಾಜ್ಯದ ಇನ್ನೊಬ್ಬ ರೈತರಾದ ರಮೇಶ್ ಭಾಯಿಯವರು ಹರಳೆಣ್ಣೆ (*Ricinus communis L.*), ನೀರು ಮತ್ತು ಅಡುಗೆ ಸೋಡಾ ಇವುಗಳನ್ನು ಬೆಳ್ಳುಳ್ಳಿಯ ಇಳುವರಿ ಹೆಚ್ಚಿಸಲು ಬಳಸುತ್ತಾರೆ. ಇದಕ್ಕಾಗಿ ಇವರು 1.5 ಲೀಟರ್ ಹರಳೆಣ್ಣೆ ಮತ್ತು 100 ಗ್ರಾಂ ಅಡುಗೆ ಸೋಡಾವನ್ನು 20 ಲೀಟರ್ ನೀರಿನಲ್ಲಿ ಮಿಶ್ರಣಮಾಡಿ ನೀರು ಹಾಯಿಸಿದ ಮೇಲೆ ಬೆಳೆಗಳಿಗೆ ಎರಡರಿಂದ ಮೂರು ಬಾರಿ ಸಿಂಪಡಿಸುತ್ತಾರೆ.

ವೈಜ್ಞಾನಿಕ ಹಿನ್ನೆಲೆ: ಸಜ್ಜೆಯು ಕೆಲವು ಪೌಷ್ಠಿಕ ಮತ್ತು ರೋಗನಿರೋಧಕ ಅಂಶಗಳನ್ನು ಒಳಗೊಂಡಿದೆ. ವಿವರಕ್ಕೆ Dreyer, D.L., Reese, J.C. & Jones, K.C. 1981. Aphid feeding deterrents in sorghum: bioassay. isolation and characterization. J. Chem. Ecol. Volume 7: pages 273-284 ನೋಡಿರಿ.

ಮೆಣಸಿನ ಬೆಳೆ ಸಂರಕ್ಷಣೆಗೆ

ಪುರುಶೋತ್ತಮ್ ಭಾಯಿಯವರು ಮೆಣಸಿನಕಾಯಿ ಬೆಳೆಯಲ್ಲಿ ರಸ ಹೀರುವ ಉಪದ್ರವಿಗಳ ನಾಶಕ್ಕಾಗಿ ತಂಬಾಕು, ಲೋಳೆಸರ (*Aloe vera*) ಮತ್ತು ನಿಂಬೆ ಹಣ್ಣಿನ ರಸವನ್ನು ನೀರಿನೊಂದಿಗೆ ಉಪಯೋಗಿಸಿಕೊಳ್ಳುತ್ತಾರೆ. ಇವರು ಎರಡು ಕೆ.ಜಿ. ತಂಬಾಕಿನ ಪುಡಿಯನ್ನು ಎರಡು ಕೆ.ಜಿ. ಲೋಳೆಸರ, 250 ಗ್ರಾಂ ನಿಂಬೆ ರಸ ಇವುಗಳನ್ನು 20 ಲೀಟರ್ ನೀರಿನೊಂದಿಗೆ ಕುದಿಸಿಕೊಳ್ಳುತ್ತಾರೆ. ಈ ಕಷಾಯವನ್ನು 15 ಲೀಟರ್ ನೀರಿನಲ್ಲಿ 250 ಮಿ.ಲೀನಂತೆ ಮಿಶ್ರಣಮಾಡಿಕೊಂಡು ಎಂಟು ದಿನಗಳಿಗೆ ಒಂದು ಬಾರಿಯಂತೆ ಬೆಳೆಗಳಿಗೆ ಸಿಂಪಡಿಸುತ್ತಾರೆ. ಈ ವಿಧಾನದಿಂದ ಬೆಳೆಗಳಲ್ಲಿ ರೋಗಗಳು ಶೇಕಡಾ 70 ರಿಂದ 80 ರಷ್ಟು ಕಡಿಮೆಯಾಗುತ್ತದೆಂದು ಹೇಳಿದ್ದಾರೆ.

ಹರಳು ಗಿಡದ ಕೊಂಡಲಿ ಹುಳುವಿಗೆ

ಗುಜರಾತಿನ ಬನಸ್ಕಾಂತ ಜಿಲ್ಲೆಯವರಾದ ಅರ್‌ಜನ್‌ಭಾಯಿ ಭಾಲಭಾಯಿ ದರಬಾರ್‌ರವರು ಆಡಿನ ಮೂತ್ರ ಮತ್ತು ಬೇವಿನ ಎಲೆಗಳನ್ನು ಹರಳು (ಔಡಲ) ಗಿಡದಲ್ಲಿ ಕಾಣಿಸಿಕೊಳ್ಳುವ ಕೊಂಡಲಿ ಹುಳದ (ಸೆಮಿ ಲೂಪರ್) ನಿಯಂತ್ರಣಕ್ಕೆ ಉಪಯೋಗಿಸುತ್ತಾರೆ.

ಇವರು ಕಬ್ಬಿಣದ ಡಬ್ಬದಲ್ಲಿ ಎರಡು ಕೆ.ಜಿ.ಯಷ್ಟು ಚೆನ್ನಾಗಿ ಅರೆದಿರುವಂತಹ ಬೇವಿನ ಎಲೆಗಳನ್ನು ಹಾಕಿ ಅದರಲ್ಲಿ ಎರಡು ಅಥವಾ ಮೂರು ಲೀಟರ್‌ನಷ್ಟು ಆಡಿನ ಮೂತ್ರವನ್ನು ಸೇರಿಸುತ್ತಾರೆ. ನಂತರ ಈ ಮಿಶ್ರಣವನ್ನು ನೀರಿನೊಂದಿಗೆ 1:3 ಅನುಪಾತದಲ್ಲಿ ಮಿಶ್ರಣಮಾಡಿಕೊಂಡು ಆಗಾಗ ಬೆಳೆಗಳಿಗೆ ಸಿಂಪಡಿಸುತ್ತಾರೆ.

ಭತ್ತದ ಕೀಟ ನಿಯಂತ್ರಣ

ಗುಜರಾತಿನ ಬನಸ್ಕಾಂತ ಜಿಲ್ಲೆಯವರಾದ ಜಮಲ್‌ಭಾಯಿ ನುರಾಭಾಯಿ ಮೋದಿಯವರು ಭತ್ತದಲ್ಲಿಯ ಕೀಟಗಳ ಹತೋಟಿಗೆ ಲಾಂಟಾನಾ (*Lantana camara L.*), ತಂಬಾಕು ಮತ್ತು ಕಕ್ಕೆ (*Cassia fistula L.*) ಗಿಡದ ಹಣ್ಣುಗಳನ್ನು ಉಪಯೋಗಿಸುತ್ತಾರೆ. ಎರಡು ಲೀಟರ್‌ಗಳಷ್ಟು ಕಷಾಯವನ್ನು ತಯಾರಿಸಿಕೊಳ್ಳಲು 200 ಗ್ರಾಂ ಲಾಂಟಾನಾ ಗಿಡದ ಹೂಬಿಡುವ ಭಾಗ, 200 ಗ್ರಾಂ ತಂಬಾಕು ಗಿಡದ ಬೇರುಗಳು ಮತ್ತು 200 ಗ್ರಾಂ ಕಕ್ಕೆಗಿಡದ ಹಣ್ಣುಗಳು ಇವುಗಳ ಮಿಶ್ರಣ ಮಾಡಿ ಮೂರು ಲೀಟರ್ ನೀರಿನಲ್ಲಿ ಕುದಿಸಿಕೊಳ್ಳುತ್ತಾರೆ. ಚೆನ್ನಾಗಿ ಕುದಿಸಿದ ನಂತರ ನೀರಿನಲ್ಲಿ ಮಿಶ್ರಣ ಮಾಡಿ ಬೆಳೆಗಳಿಗೆ ಸಿಂಪಡಿಸುತ್ತಾರೆ.

ವೈಜ್ಞಾನಿಕ ಹಿನ್ನೆಲೆ: ಲಾಂಟಾನಾ, ಕಕ್ಕೆಗಿಡ ಹಾಗು ತಂಬಾಕಿನ ಔಷಧೀಯ ಗುಣಗಳನ್ನು ಹಲವು ಹನಿ ಬೀ ಸಂಚಿಕೆಗಳಲ್ಲಿ ಈಗಾಗಲೆ ದಾಖಲಿಸಲಾಗಿದೆ. ಲಾಂಟಾನಾವನ್ನು ಬಿಳಿ ನೊಣಗಳ ಹತೋಟಿಗಾಗಿ (Patel, R. 2001. Gandhati: A successful remedy for whitefly control. Honey Bee. 12(2):11. Raman, SR. 2000.) ತಂಬಾಕನ್ನು ಎಫಿಡ್ಸ್ ಕೂದಲಿರುವ ಕಂಬಳಿಹುಳ ಇನ್ನು ಮುಂತಾದ ಕೀಟಗಳ ನಾಶಕ್ಕಾಗಿ (Patel, R. 2000. Tobacco for pest control in Maize. Honey Bee 11(3):, Mandal, TK. 2001. Pesticide from tobacco. Honey Bee. 12(3):17, Stem borer (Patel, 2000)) ಕಕ್ಕೆಗಿಡವನ್ನು ಕೀಟನಾಶಕವಾಗಿ ಬಳಸಲಾಗುತ್ತಿದೆಯೆಂದು ಈಗಾಗಲೇ ತಿಳಿದುಬಂದಿದೆ. (Govindarajan M (2009) Bioefficacy of Cassia fistula Linn. (Leguminosae) leaf extract against chikungunya vector, Aedes aegypti (Diptera: Culicidae) Eur Rev Med Pharmacol Sci Volume 13(2): pages 99-103.)

ಮೂಲ: *Honey Bee Vol 20(4)-21(.1) October 2009 to March 2010*

ಕೊಕೋನಟ್ ಆ್ಯಪಲ್

ತೆಂಗಿನ ಕಾಯಿಯೊಳಗೆ ತಯಾರಾಗುವ ಕೊಕೋನಟ್ ಆ್ಯಪಲನ್ನು ತುಮಕೂರು ಜಿಲ್ಲೆ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಹಂದನಕೆರೆಯ ವಿನೋದ್‌ರವರು ಮಾರುಕಟ್ಟೆಗೆ ಪರಿಚಯಿಸುತ್ತಿದ್ದಾರೆ.

ತೆಂಗಿನ ಕಾಯಿಯು ಮೊಳಕೆ ಬರುವಂತಹ ಸಮಯದಲ್ಲಿ ಸಸಿಯು ಕಾಯಿಯ ಒಳಗೆ ಇರುವ ನೀರನ್ನು ಬಳಸಿಕೊಂಡಾಗ ಒಳಗೆ ಕೊಬ್ಬರಿ ತರಹದ ಪದರು ಬೆಳೆದುಕೊಳ್ಳುತ್ತಾ ಹೋಗುತ್ತದೆ. ಇದು ಸ್ಪಂಜಿನ ತರಹ ಮೃದುವಾಗಿದ್ದು ಹಾಲಿನ ಕೆನೆ ಬಣ್ಣದಿಂದ ಕೂಡಿರುತ್ತದೆ. ಇದನ್ನು 'ಕೊಕೋನಟ್ ಆ್ಯಪಲ್' ಎಂದು ಕರೆಯಲಾಗುತ್ತಿದ್ದು ಇದು ಕೆಲವು ರೈತರಿಗೆ ಮಾತ್ರ ತಿಳಿದಿರುವಂತಹ ವಿಷಯವಾಗಿದೆ. ಈ ಕೊಕೋನಟ್ ಆ್ಯಪಲ್ ತೆಂಗಿನಕಾಯಿ ಮೊಳಕೆ ಬಂದ ಎರಡರಿಂದ ಮೂರು ತಿಂಗಳೊಳಗೆ ಬಳಸಲು ಚೆನ್ನಾಗಿರುತ್ತದೆ. ಒಮ್ಮೆ ವಿನೋದ್‌ರವರು ತಮ್ಮ ತೋಟದಲ್ಲಿ ಕೊಕೋನಟ್ ಆ್ಯಪಲನ್ನು ತಿನ್ನುತ್ತಿರುವಾಗ ಉತ್ಕೃಷ್ಟ ಸ್ವಾದ ಹೊಂದಿರುವ ಇದನ್ನು ತುಂಡಾಗದ ಹಾಗೆ ತೆಗೆದು ಮಾರುಕಟ್ಟೆಗೆ ಪರಿಚಯಿಸಲು ಯೋಚಿಸಿದ್ದಾರೆ.

ಮೊದಲ ಬಾರಿ ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ 2007ರಲ್ಲಿ ನಡೆದ ಕೃಷಿಮೇಳದಲ್ಲಿ ಕೊಕೋನಟ್ ಆ್ಯಪಲನ್ನು ಆಕರ್ಷಕವಾಗಿ ಪ್ಯಾಕ್‌ಮಾಡಿ "ಕೊಕೋಪಿಲ್ಜ್" ಎಂಬ ಹೆಸರಿನಿಂದ ಪರಿಚಯಿಸಿದ್ದಾರೆ. ಅಲ್ಲದೆ ಬಳ್ಳಾರಿಯ ಗಣಿಗಾರಿಕೆ ಪ್ರದೇಶಗಳ ಹೋಟಲ್‌ಗಳಲ್ಲಿ ಮತ್ತು ಸ್ಟಾರ್ ಹೋಟಲ್‌ಗಳಾದ ಅಶೋಕಾ ಹಾಗು ವಿಟ್ರಿಯಾ ಹೋಟೆಲ್‌ಗಳಲ್ಲಿಯೂ ಇದನ್ನು ಪರಿಚಯಿಸಿದ್ದಾರೆ.



ಕೊಕೋನಟ್ ಆ್ಯಪಲನ್ನು ತುಂಡಾಗದ ಹಾಗೆ ತೆಗೆದರೆ ಆಕರ್ಷಕವಾಗಿ ಕಾಣುತ್ತದಲ್ಲದೇ ಹೆಚ್ಚು ಗ್ರಾಹಕರನ್ನು ಸೆಳೆಯುತ್ತದೆ. ಇದಕ್ಕಾಗಿ ವಿನೋದ್ ರವರು ಬೆಂಗಳೂರಿನಿಂದ ಹಳೆಯ ಬ್ಲೇಡನ್ನು ಖರೀದಿಸಿ ಕತ್ತರಿಸುವ ಸಾಧನವನ್ನು ತಾವೇ ಸ್ವತಃ ತಯಾರಿಸಿ ಕೊಂಡಿದ್ದಾರೆ. ಮೋಟಾರನ್ನು ಸೇರಿಸಿ ಈ ಸಾಧನದ ಬೆಲೆಯು 5000 ರೂ. ಆಗುತ್ತದೆಯಂತೆ. ಈ ಕೊಕೋನಟ್ ಆ್ಯಪಲನ್ನು ಒಂದು ಅಥವಾ ಎರಡು ದಿನ ಇಡಬಹುದು, ಫ್ರಿಜ್‌ನಲ್ಲಾದರೆ ಮೂರುದಿನ ಇಡಬಹುದಂತೆ. ಕೊಕೋನಟ್ ಆ್ಯಪಲನ್ನು ತೆಗೆದಾದ ನಂತರ ಉಳಿದಿರುವ ತೆಂಗಿನಕಾಯಿಯಲ್ಲಿ ಸ್ವಲ್ಪ ಪ್ರಮಾಣದ ಎಣ್ಣೆಯನ್ನು ತೆಗೆಯಬಹುದು ಹಾಗು ಕೊಕೋನಟ್ ಆ್ಯಪಲನ್ನು ತೆಗೆಯುವ ಮೊದಲು ಜಾಗ್ರತೆಯಾಗಿ ಬೆಳೆದಿರುವಂತ ಗಿಡವನ್ನು ತೆಂಗಿನಕಾಯಿಯಿಂದ ಬಿಡಿಸಿಕೊಂಡರೆ, ಸಸಿಯೂ ಉಳಿದಂತಾಗುತ್ತದೆ ಎಂದು ವಿನೋದ್ ಹೇಳಿದ್ದಾರೆ. ಕೊಕೋನಟ್ ಆ್ಯಪಲ್‌ನಲ್ಲಿರುವ ಪೌಷ್ಠಿಕಾಂಶಗಳ ಟೆಸ್ಟ್ ಸರ್ಟಿಫಿಕೇಟನ್ನು ಸಹ ಮಾಡಿಸಿದ್ದಾರೆ. ಇನ್ನು ಹೆಚ್ಚಿನ ವಿವರಗಳಿಗೆ ವಿನೋದ್‌ರವರನ್ನು 944835736 ಗೆ ಸಂಪರ್ಕಿಸಬಹುದು.


ಗೂಬೆ ಮೂಲಕ ಇಲಿಗಳ ನಿಯಂತ್ರಣ

ಇಲಿಗಳು ಮನೆಯಲ್ಲಿ ಅಲ್ಲದೇ ಹೊಲಗಳಲ್ಲಿ, ತರಕಾರಿ, ಹಣ್ಣಿನ ಮತ್ತು ತೆಂಗು ತೋಟಗಳಲ್ಲಿಯೂ ಸಹ ತುಂಬಾ ತೊಂದರೆಗಳನ್ನು ಕೊಡುತ್ತವೆ. ಇಲಿಗಳ ನಿಯಂತ್ರಣಕ್ಕೆ ಆಹಾರದಲ್ಲಿ ವಿಷ ಬೆರೆಸಿ ಹಾಕುವುದು, ಬೋನುಗಳನ್ನು ಇಡುವುದು, ತೋಟಗಳಲ್ಲಾದರೆ ತಗಡಿನ ಹಾಳೆಗೆ ಎಣ್ಣೆಯನ್ನು ಸವರಿ ಮರಕ್ಕೆ ಸುತ್ತುವುದು ಇತ್ಯಾದಿ ವಿಧಾನಗಳನ್ನು ಅನುಸರಿಸುತ್ತಾರೆ. ಆದರೆ ಸಾವಯವ ರೈತರಾದ ಸಂತೇಶಿವರದ ಬಸರಾಜುರವರು ವಿಭಿನ್ನ ರೀತಿಯಲ್ಲಿ ತಮ್ಮ ತೋಟದಲ್ಲಿ ಇಲಿಗಳ ನಿಯಂತ್ರಣವನ್ನು ಮಾಡಿದ್ದಾರೆ. ಪ್ರಕೃತಿಯಲ್ಲಿ ಸಹಜವಾಗಿಯೇ ಗೂಬೆಗಳ ಸಹಾಯದಿಂದ ಇಲಿಗಳ ನಿಯಂತ್ರಣವಾಗುತ್ತದೆ. ಇಲಿಗಳು ಗೂಬೆಗಳ ಮುಖ್ಯ ಆಹಾರವಾಗಿದೆ. ಇವು ದಿನವೂ ಒಂದು ಅಥವಾ ಎರಡು ಇಲಿಗಳನ್ನು ಹಿಡಿದು ತಿನ್ನುತ್ತವೆ ಹಾಗೂ ಹಗಲು ಹೊತ್ತಿನಲ್ಲಿ ಮರಗಳ ಮೇಲೆ ಕುಳಿತುಕೊಂಡು ವಿಶ್ರಾಂತಿ ಪಡೆಯುತ್ತವೆ. ಇಂತಹ ಗೂಬೆಗಳಿಗೆ ತೋಟಗಳಲ್ಲಿ ವಾಸಮಾಡುವಂತೆ ಅನುಕೂಲ ಮಾಡಿಕೊಟ್ಟರೆ ಆ ಪ್ರದೇಶದ ಸುತ್ತಮುತ್ತ ಇಲಿಗಳ ನಿಯಂತ್ರಣವಾಗಬಹುದು ಎಂಬ ಯೋಚನೆಯಿಂದ ಬಸವರಾಜುರವರು ತಮ್ಮ ತೋಟದಲ್ಲಿ ಅಳವಡಿಸಿಕೊಂಡ ವಿಧಾನ ಹೀಗಿದೆ. ಹಳೆಯ ಡ್ರಮ್‌ನ ಮಧ್ಯಭಾಗದಲ್ಲಿ ಗೂಬೆಯು ಕುಳಿತುಕೊಳ್ಳಲು ಅನುಕೂಲವಾಗುವಂತೆ ನಾಲ್ಕು ರಂಧ್ರಗಳನ್ನು ಮಾಡಿ ಅದರಲ್ಲಿ ಕೋಲುಗಳನ್ನು ಸೇರಿಸಬೇಕು. ನಂತರ ಕೆಳಭಾಗದಲ್ಲಿ ಅದರ ವಿಸರ್ಜನೆಗಳು ಕೆಳಗೆ ಬೀಳುವಂತೆ ದೊಡ್ಡ ರಂಧ್ರಗಳನ್ನು ಮಾಡಬೇಕು. ಒಣಗಿರುವ ಬಾಳೆಯ ಅಥವಾ ಅಡಿಕೆಯ ಗರಿಗಳನ್ನು ಡ್ರಮ್‌ನ ಮೇಲೆ ಹೊದಿಸಿ ಅದನ್ನು ಬೇವಿನ, ಹುಣಸೆ, ಹಲಸಿನ ಅಥವಾ ಬೇರೆ ಯಾವುದಾದರು ಮರದ ಮೇಲಿಡಬೇಕು. ಇದು ಗೂಡಿನಂತೆ ಕಾಣುವುದರಿಂದ ಕೆಲವೇ ದಿನಗಳಲ್ಲಿ ಗೂಬೆಯು ಇದರಲ್ಲಿ ವಾಸಿಸಲು ಪ್ರಾರಂಭಿಸುತ್ತದೆ. ಈ ವಿಧಾನವನ್ನು ಹೊಲಗಳಲ್ಲಿ, ಗದ್ದೆಗಳಲ್ಲಿ ಕೂಡ ಅಳವಡಿಸಿ ಇಲಿಗಳನ್ನು ನಿಯಂತ್ರಿಸಬಹುದು.

ಕೆಲವು ಬಾರಿ ಇಲಿಗಳೇನಾದರೂ ಮರದ ಮೇಲೆ ಇರುವುದನ್ನು ಗಮನಿಸಿದರೆ ಆ ಮರದ ಕಾಂಡದ ಸುತ್ತ ಒಣಗಿರುವ ತೆಂಗಿನ ಗರಿಗಳನ್ನು ಕಟ್ಟಬೇಕು. ಮೇಲಿರುವ ಇಲಿಗಳಿಗೆ ಇದು ಬಲೆಯಂತೆ ಕಾಣಿಸುವುದರಿಂದ ಕೆಳಗಿಳಿಯುವ ಧೈರ್ಯ ಮಾಡುವುದಿಲ್ಲ, ರಾತ್ರಿ ವೇಳೆಯಲ್ಲಿ ಈ ಇಲಿಗಳನ್ನು ಗೂಬೆಗಳು ಸುಲಭವಾಗಿ ಬೇಟೆಯಾಡುತ್ತವೆ. ಈ ವಿಧಾನವನ್ನು ಬಸವರಾಜುರವರು 1983 ರಲ್ಲೇ ತಮ್ಮ ತೋಟಕ್ಕೆ ಅಳವಡಿಸಿಕೊಂಡಿದ್ದಾರೆ. ಈಗ ಅವರ ತೋಟದಲ್ಲಿ ಎಂಟು ಗೂಬೆಗಳಿವೆಯಂತೆ. ಹಾಗೂ ಇಲಿಗಳ ಹಾವಳಿಯೂ ಇಲ್ಲವಂತೆ. ಬಸವರಾಜುರವರು "ಗೂಬೆ ಅಪಶಕುನದ ಪಕ್ಷಿ ಎಂಬ ಭಾವನೆ ರೈತರಲ್ಲಿದೆ. ಇದು ಅಪಶಕುನದ ಪಕ್ಷಿಯಲ್ಲ, ಇದು ಸಂಪತ್ತಿನ ದೇವತೆ ಲಕ್ಷ್ಮಿಯ ವಾಹನ. ನಿತ್ಯ ಬೆಳಗ್ಗೆ ನಾನು ಅವನ್ನು ನೋಡುತ್ತೇನೆ ಅದರಿಂದ ಕೆಟ್ಟದ್ದೇನೂ ಆಗಿಲ್ಲ" ಎಂದು ಹೇಳಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಬಸವರಾಜುರವರನ್ನು 9611608472 ಗೆ ಸಂಪರ್ಕಿಸಬಹುದು.

ಮೂಲ: ಪ್ರಜಾವಾಣಿ, ಗುರುವಾರ, 1 ಎಪ್ರಿಲ್ 2010


ಮಾಗಡಿ ತಾಲ್ಲೂಕಿನ, ಅಜ್ಜನ ಹಳ್ಳಿಯ ಶ್ರೀನಿವಾಸರವರು ಬಿದಿರಿನಲ್ಲಿ ಅನೇಕ ತರಹದ ಕರಕುಶಲ ವಸ್ತುಗಳನ್ನು ಹೆಣೆದಿದ್ದಾರೆ. ಬಿದಿರಿನಿಂದ ಬುಟ್ಟಿ ಹೆಣೆಯುವುದು ಇವರ ಕುಲಕಸುಬಾಗಿದ್ದು, ಈ ಕಲೆಯನ್ನು ಇವರ ಕುಟುಂಬ ಸುಮಾರು 35-40 ವರ್ಷಗಳ ಹಿಂದೆಯೇ ಜೀವನೋಪಾಯಕ್ಕಾಗಿ ಅಳವಡಿಸಿಕೊಂಡಿತ್ತು. ಶ್ರೀನಿವಾಸರವರು ಚಿಕ್ಕಂದಿನಲ್ಲಿಯೇ ಅವರ ತಂದೆಗೆ ಬುಟ್ಟಿಗಳನ್ನು ಹೆಣೆಯಲು ನೆರವಾಗುತ್ತಿದ್ದರು. ಹಾಗೆಯೇ ದೊಡ್ಡ ಬುಟ್ಟಿಗಳನ್ನು ಹೆಣೆಯಲು ಕಲಿತ ಅವರು ತಮ್ಮ ಬಿಡುವಿನ ವೇಳೆಯಲ್ಲಿ ಮನೋರಂಜನೆಗಾಗಿ ಚಿಕ್ಕ ಚಿಕ್ಕ ಬುಟ್ಟಿಗಳನ್ನು ಹೆಣೆಯಲು ಪ್ರಾರಂಭಿಸಿದರು. ಏಳನೆಯ ತರಗತಿಯವರೆಗೆ ಓದಿರುವ ಇವರು ಕರ್ನಾಟಕ ರಾಜ್ಯ ಹಣಕಾಸು ನಿಗಮ (ಕೆ.ಎಸ್.ಎಫ್.ಸಿ.)ದಲ್ಲಿ ಕೆಲಸ ಸಿಕ್ಕ ನಂತರ ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ಹಲವಾರು ವರ್ಷಗಳವರೆಗೆ ಅದರಲ್ಲಿ ಸೇವೆ ಸಲ್ಲಿಸಿ ಅದರಿಂದ ನಿವೃತ್ತಿಹೊಂದಿದ್ದಾರೆ. ಈಗ ಪುನಃ ಒಂದು ವರ್ಷದಿಂದ ಚಿಕ್ಕಚಿಕ್ಕ ಬುಟ್ಟಿಗಳನ್ನು ಹೆಣೆಯಲು ಪ್ರಾರಂಭಿಸಿದ್ದು, ಅವರಿಗೇ ನಂಬಲು ಸಾಧ್ಯವಾಗದಂತಹ ಚಿಕ್ಕ ಬುಟ್ಟಿಗಳನ್ನು ಅಂದರೆ ಸುಮಾರು 7.ಮಿ.ಮೀ. ಅಳತೆಯಲ್ಲಿ ಹೆಣೆದಿರುವುದನ್ನು ನೋಡಿ ಗಿನ್ನಿಸ್ ದಾಖಲೆ ಮಾಡುವತ್ತ ಗಮನಹರಿಸಿದ್ದಾರೆ. ಚಿಕ್ಕ ಬುಟ್ಟಿಗಳನ್ನು ಮಾತ್ರವಲ್ಲದೆ ಶ್ರೀನಿವಾಸರವರು ಬಿದಿರಿನಿಂದ ಹೂದಾನಿ, ಟ್ರೇ, ಕುಡಿಯುವ ನೀರಿನ ಗ್ಲಾಸ್, ಬಾಟಲ್ ಹಾಗೂ ಬಾಟಲಿಗೆ ಮುಚ್ಚಳವನ್ನು ತಯಾರಿಸಿದ್ದಾರೆ. ಇಂತಹ ಸಣ್ಣ ವಸ್ತುಗಳನ್ನು ಹೆಣೆಯಲು ಇತರ ಬಿದಿರಿಗಿಂತ ಸ್ವಲ್ಪ ಮೃದುತ್ವವನ್ನು ಹೊಂದಿರುವ ಬೆಳಗಾಂ ಬಿದಿರನ್ನು ಉಪಯೋಗಿಸುತ್ತಾರೆ.



ಬಿದಿರಿನ ಉತ್ಪನ್ನಗಳನ್ನು ಸುಂದರವಾಗಿ ಮತ್ತು ಚಿಕ್ಕದಾಗಿ ಹೆಣೆದಿರುವುದು ಅವರಲ್ಲಿರುವ ಸೂಕ್ಷ್ಮ ಕೌಶಲ್ಯವನ್ನು ತೋರಿಸುತ್ತದೆ. ಮನೆ ಯಲ್ಲಿ ಅಲಂಕಾರಿಕ ವಸ್ತು ಗಳಾಗಿ ಉಪಯೋಗಿಸ ಬಹುದಾದ ಈ ಕರಕುಶಲ ವಸ್ತುಗಳನ್ನು ತಯಾರಿಸಿ ಕೊಡಲು ನೂರಾರು ಕರೆಗಳು ಇವರಿಗೆ ಬಂದಿದ್ದು, ಇನ್ನು ಹೆಚ್ಚಿನ ರೀತಿಯಲ್ಲಿ ತಯಾರಿಸುವುದಾಗಿ ಹೇಳಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಶ್ರೀನಿವಾಸರವರನ್ನು 8971400272 ಗೆ ಸಂಪರ್ಕಿಸಬಹುದು.

ಕೇರಳದ, ಪಟ್ಟಣಂತಿಟ್ಟ ಜಿಲ್ಲೆಯ, ತಿರುವಲ್ಲಿ ಊರಿನ ಕೆ.ಜಿ.ಜಾರ್ಜರವರು ತಮ್ಮ ಮೂರು ಎಕರೆಯ ಪ್ರದೇಶದಲ್ಲಿ ಮಹಾಗನಿ (*Swietenia mahagoni (L.) Jacq.*) ಗಿಡಗಳನ್ನು ಬೆಳೆಸಿದ್ದಾರೆ. ಅವರು ಬಿಡುವಿನ ವೇಳೆಯಲ್ಲಿ ಮಹಾಗನಿ ಗಿಡಗಳ ಸ್ವಲ್ಪ ತೊಗಟೆಯನ್ನು ಲಂಬವಾಗಿ ತೆಗೆಯುತ್ತಿದ್ದರಂತೆ. ಒಂದು ವರ್ಷದ ನಂತರ ತೊಗಟೆ ತೆಗೆದಿರುವಂತಹ ಗಿಡಗಳ ಕಾಂಡದ ಸುತ್ತಳತೆಯು ಉಳಿದ ಕಾಂಡದ ಸುತ್ತಳತೆಗಿಂತ ದುಪ್ಪಟ್ಟು ಹೆಚ್ಚಾಗಿರುವುದನ್ನು ಗಮನಿಸಿದ್ದಾರೆ. ನಂತರ ಉಳಿದ ಗಿಡಗಳಿಗೆ ಸಹ ಇದೇ ವಿಧಾನವನ್ನು ಮುಂದುವರೆಸಿದ ಅವರು ಒಳ್ಳೆಯ ಫಲಿತಾಂಶವನ್ನು ಪಡೆದುಕೊಂಡಿದ್ದಾರೆ.

ಸಾಮಾನ್ಯವಾಗಿ ಮಹಾಗನಿ ಗಿಡವು ಬೆಳೆಯುವ ಸಮಯದಲ್ಲಿ ಕಾಂಡದಲ್ಲಿ ಸೀಳುಗಳು ಉಂಟಾಗುವುದರಿಂದ ಕಾಂಡದ ಸುತ್ತಳತೆ ಹೆಚ್ಚಲು ಕಾರಣವಾಗುತ್ತದೆ. ಮತ್ತು ವರ್ಷಕ್ಕೆ ಒಂದು ಅಥವಾ ಎರಡು ಇಂಚಿನಷ್ಟು ಅಗಲವಾಗುತ್ತದೆ. ಆದರೆ ತಾವು ಅನುಸರಿಸುವ ಈ ವಿಧಾನದಿಂದ ಕಾಂಡದ ಸುತ್ತಳತೆಯು ವರ್ಷಕ್ಕೆ ಮೂರರಿಂದ ನಾಲ್ಕು ಇಂಚಿನಷ್ಟು ಹೆಚ್ಚಾಗುತ್ತದೆಂದು ಜಾರ್ಜರವರು ಹೇಳಿದ್ದಾರೆ. ಇವರ ಈ ವಿಧಾನವನ್ನು ಹಲವಾರು ರೈತರು ಅನುಸರಿಸುತ್ತಿದ್ದು ಒಳ್ಳೆಯ ಫಲಿತಾಂಶವನ್ನು ಪಡೆದಿದ್ದಾರೆ.



2006ರಲ್ಲಿ ಚಿಂಗ್ ಜು ಎಟ್‌ನವರು ಅಧ್ಯಯನ ಮಾಡಿರುವಂತೆ ಕಾಂಡ ದಲ್ಲಿಯ ಸೀಳುಗಳು, ಗಿಡಗಳಲ್ಲಿ ಉಂಟಾಗುವ ಒಂದು ತರಹದ ಒತ್ತಡ ದಿಂದ ಉಂಟಾಗುತ್ತವೆ. ಈ ಸಂಕೇತಗಳು ಎರಡನೆಯ ಬೆಳವಣಿಗೆ ಹೆಚ್ಚಾಗಲು ಕಾರಣವಾಗುತ್ತದೆ ಮತ್ತು ವಿವಿಧ ಋತುಗಳ ಪ್ರಭಾವಕ್ಕೊಳಪಡುತ್ತದೆ. ಒಲಿವರ್ ಡೂನಿಚ್ (2006) ಹೇಳಿರುವ ಪ್ರಕಾರ ಜೀವಕೋಶದ ನಿರ್ಮಾಣ ಮತ್ತು ಬೆಳವಣಿಗೆಯು ಮಾಹಾಗನಿಯ ಕ್ಸೈಲಮ್‌ನ ಎರಡನೆಯ ಬೆಳವಣಿಗೆಯ ಮೇಲೆ ಒತ್ತಡವನ್ನುಂಟು ಮಾಡುತ್ತದೆ.

ಕಾಡು ಪಡುವಲ (*Trichosanthes dioica L.*)ವನ್ನು ಸಾಮಾನ್ಯವಾಗಿ ಬೇಸಿಗೆಯಲ್ಲಿ ಬೆಳೆಯಲಾಗುತ್ತದೆ. ಆದರೆ ಕಳೆದ 5-6 ವರ್ಷಗಳಿಂದ ತುಂಬ ಬಿಸಿಲಿನ ಶಾಖವಿರುವುದರಿಂದ ಇಳುವರಿಯಲ್ಲಿ ಇಳಿಮುಖವಾಗಿದೆ. ಅಲ್ಲದೆ ವಾತಾವರಣದ ಬದಲಾವಣೆ ಮತ್ತು ಬಿಸಿಗಾಳಿಯಿಂದ ಕಾಯಿಯು ಚಿಕ್ಕದಿರುವಾಗಲೇ ಹಳದಿ ಬಣ್ಣಕ್ಕೆ ತಿರುಗಿ, ಸುರುಟಿದಂತೆ ಕಾಣುತ್ತದೆ. ಇದಕ್ಕೆ ಪರಿಹಾರವಾಗಿ ಒರಿಸ್ಸಾದ, ಅಂಗುಲ್ ಜಿಲ್ಲೆಯ, ಬಂದನಪಾಸಿ ಊರಿನವರಾದ ಕಾರ್ತಿಕರವರು ಭತ್ತದ ಹುಲ್ಲಿನಿಂದ ಸುರುಳಿಯಾಕಾರವಾಗಿ ಚಾಪೆಯನ್ನು ಹೆಣೆದು ಅದನ್ನು ಪ್ರತಿಗಿಡದ ಬೇರಿನ ಸುತ್ತಲು ಹರಡುತ್ತಾರೆ. ಇದರಿಂದ ಮಣ್ಣು ತೇವಾಂಶವನ್ನು ಹೆಚ್ಚು ಸಮಯದವರೆಗೆ ಹಿಡಿದಿಟ್ಟುಕೊಳ್ಳುತ್ತದೆ. ಅಲ್ಲದೆ ಇದರಿಂದ ಕಳೆಯ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ ಎಂದು ಹೇಳಿದ್ದಾರೆ. ಈ ವಿಧಾನವನ್ನು ಕಾರ್ತಿಕರವರು ಎರಡು ವರ್ಷಗಳಿಂದ ಅನುಸರಿಸುತ್ತಿದ್ದು ಒಳ್ಳೆಯ ಫಲಿತಾಂಶಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಹುಲ್ಲಿನ ಹೊದಿಕೆಯು ಕಳೆಯ ಬೆಳವಣಿಗೆಯನ್ನು ಕಡಿಮೆ ಮಾಡುತ್ತದಲ್ಲದೇ ಬೆಳೆಯ ಇಳುವರಿಯು ಗಣನೀಯವಾಗಿ ಹೆಚ್ಚಾಗುತ್ತದೆ ಎಂದು ಸಾಬೀತಾಗಿದೆ. ವಿವರಕ್ಕೆ Ghorai, A.K.&Hera, P.S. (1998), Indian Journal of Weed Science, Volume.30 (1&2) http://www.indianjournals.com ನೋಡಿರಿ.

ಮೂಲ: Honey Bee Vol 20(4)-21(1) October 2009 to March 2010

ಹಲವಾರು ನಾದಗಳ "ಬಾರಾವಾದ್ಯ"

ದೇವಸ್ಥಾನಗಳಲ್ಲಿ ಹನ್ನೆರಡು ವಾದ್ಯಗಳು ಏಕಕಾಲದಲ್ಲಿಯೇ ನಾದಘೋಷ ಮೊಳಗಿಸುವಂತಹ ಯಂತ್ರವನ್ನು 31 ವರ್ಷ ವಯಸ್ಸಿನ ಬಸವರಾಜ್ ಈರಪ್ಪ ಬಡಿಗೇರ್‌ರವರು ತಯಾರಿಸಿದ್ದಾರೆ. ಇವರು ಗದಗ ಜಿಲ್ಲೆಯ, ರೋಣ ತಾಲ್ಲೂಕಿನ ಮೆಣಸಿಗೆ ಗ್ರಾಮದವರು. ಇವರು ಮೆಕ್ಯಾನಿಕ್ ವಿಷಯದಲ್ಲಿ ಐಟಿಐ ಮಾಡಿದ್ದಾರೆ. ವೃತ್ತಿಯಲ್ಲಿ ಅರ್ಚಕರಾಗಿದ್ದರೂ ಅದ್ಭುತವಾಗಿ ಕೆತ್ತನೆಯನ್ನು ಹಾಗು ವೆಲ್ಡಿಂಗ್ ಕೆಲಸವನ್ನೂ ಮಾಡುತ್ತಾರೆ.

ಒಮ್ಮೆ ಉಡುಪಿಯ ಶ್ರೀ ಕೃಷ್ಣ ದೇವಸ್ಥಾನಕ್ಕೆ ಹೋದಾಗ ವಿದ್ಯುತ್ ಸಹಾಯದಿಂದ ಮೊಳಗುತ್ತಿರುವ ಏಕನಾದ ಹೊರಡಿಸುತ್ತಿದ್ದ ವಾದ್ಯವೊಂದು ಇವರ ಗಮನ ಸೆಳೆಯಿತು. ತಮ್ಮ ಊರಿನ ದೇವಸ್ಥಾನದಲ್ಲೂ ಈ ತಂತ್ರಜ್ಞಾನವನ್ನು ಅಳವಡಿಸಬೇಕೆಂಬ ಇಚ್ಛೆಯೇ ಯಂತ್ರವನ್ನ ತಯಾರಿಸಲು ಪ್ರೇರಣೆಯಾಯಿತು ಎಂದು ಹೇಳಿದ್ದಾರೆ. ಆ ಯಂತ್ರವನ್ನು ಕೂಲಂಕುಶವಾಗಿ ಗಮನಿಸಿ ವಿದ್ಯುತ್ ಚಾಲಿತ ಮಂಗಳವಾದ್ಯವನ್ನು ತಯಾರಿಸುವಲ್ಲಿ ಯಶಸ್ವಿಯೂ ಆದರು. ಸಾಮಾನ್ಯವಾಗಿ ಇಂದಿನ ದಿನಗಳಲ್ಲಿ ದೇವಸ್ಥಾನಗಳಲ್ಲಿ ವಿದ್ಯುತ್ ಸಹಾಯದಿಂದ ಮಂಗಳ ವಾದ್ಯಗಳು ಮೊಳಗುತ್ತವೆ. ಅವುಗಳಲ್ಲಿ ಕೆಲವು ವಾದ್ಯಗಳಾದ ನಗಾರಿ, ಗಂಟೆಗಳು, ಜಾಗಟೆ, ತಾಳಗಳನ್ನು ಮಾತ್ರ ಕಾಣಬಹುದು. ಆದರೆ ಇವರು ವಾದ್ಯಗಳಾದ ಶಹನಾಯಿ, ಡಮರು, ಡೊಳ್ಳು, ಗಂಟೆ, ಕಹಳೆ, ಶಂಖ, ನಗಾರಿ, ಜಾಗಟೆ, ಚಿಟಿಕೆವಾದ್ಯ, ಭಜನೆ, ಸಂಬಳವಾದ್ಯ ಮತ್ತು ಸ್ಟೀಲ್‌ಡ್ರಮ್ ಸೆಟ್, ಈ 12 ವಾದ್ಯಗಳು ಏಕಕಾಲದಲ್ಲಿ ನಾದಘೋಷ ಮೊಳಗಿಸುವಂತಹ ಯಂತ್ರವನ್ನು ತಯಾರಿಸಿದ್ದಾರೆ. ಹಾಗೂ ಈ ಯಂತ್ರಕ್ಕೆ "ಬಾರಾವಾದ್ಯ" ಎಂದು ಹೆಸರಿಸಿದ್ದಾರೆ. ಇದಕ್ಕೆ ಅರ್ಧ ಎಚ್.ಪಿ. ಮೋಟಾರನ್ನು ಅಳವಡಿಸಿದ್ದು, ವಿದ್ಯುತ್ ಇಲ್ಲದ ಸಮಯದಲ್ಲಿ ಕೈಯಿಂದಲೂ ಚಾಲನೆ ಮಾಡಬಹುದಂತೆ. ಇವರು ತಯಾರಿಸಿರುವ ಬಾರಾವಾದ್ಯದ ಮಧುರ ನಾದವು ಸುಮಾರು ಒಂದೂವರೆ ಕಿ.ಮೀ. ದೂರದವರೆಗೂ ಕೇಳಿಸುತ್ತದೆ. ಇದು ಎರಡೂವರೆ ಕ್ವಿಂಟಾಲ್ ತೂಕವಿದ್ದು ತಯಾರಿಸಲು ಒಂದು ಲಕ್ಷ ರೂಪಾಯಿ ವೆಚ್ಚವಾಗುತ್ತದೆಯಂತೆ. ರಥೋತ್ಸವದ ಸಮಯದಲ್ಲಿ ತೇರಿನ ಜೊತೆಗೆ ಸಾಗಿಸಲು ಸಹಾಯವಾಗುವಂತೆ ಗಾಲಿಗಳನ್ನು ಅಳವಡಿಸುವ ಹಾಗೆ ಅನುಕೂಲತೆಗಳನ್ನು ಮಾಡಿದ್ದಾರೆ.

ಈಗಾಗಲೇ ಸುಮಾರು ಐವತ್ತಕ್ಕೂ ಹೆಚ್ಚು ವಾದ್ಯಗಳನ್ನು ತಯಾರಿಸಿ ಮಾರಾಟ ಮಾಡಿರುವ ಇವರು ಇಂತಹಾ ಒಂದು ವಾದ್ಯವನ್ನು ಕೇವಲ ಒಂದು ತಿಂಗಳಲ್ಲೇ ತಯಾರಿಸಿಕೊಡಬಲ್ಲ ನೈಪುಣ್ಯತೆಯನ್ನು ಹೊಂದಿದ್ದಾರೆ. ಹೆಚ್ಚಿನ ವಿವರಗಳಿಗೆ ಬಸವರಾಜು ಅವರನ್ನು 9964196744 ಗೆ ಸಂಪರ್ಕಿಸಬಹುದು.

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಈ ಅನುಶೋಧನೆಗಳನ್ನು ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ . ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

- ಸಂಪಾದಕ

ಹಲಸಿನ ಮೇಳ

ಬೆಂಗಳೂರಿನ ಗಾಂಧಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮೇ 21, 22 ಮತ್ತು 23 ರಂದು ಮೂರು ದಿನಗಳ ಕಾಲ ಹಲಸಿನ ಮೇಳ ನಡೆಯಿತು. ಈ ಮೇಳದಲ್ಲಿ ಅನೇಕ ವಿಧದ ಹಲಸಿನ ತಳಿಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಹಲವಾರು ರೈತರು ಈ ಮೇಳದಲ್ಲಿ ಭಾಗವಹಿಸಿದ್ದು ತಮ್ಮಲ್ಲಿ ಬೆಳೆದಿರುವಂತಹ ವಿಶಿಷ್ಟ ರೀತಿಯ ತಳಿಗಳನ್ನು ಹಾಗು ಅವುಗಳ ಸಸಿಗಳನ್ನು ಮಾರಾಟಕ್ಕಿಡಲಾಗಿತ್ತು. ಹಲಸಿನ ಉತ್ಪನ್ನಗಳಾದ ಹಪ್ಪಳ, ಚಿಪ್ಸ್, ಹಣ್ಣಿನ ಜಾಮ್, ಶ್ರೀಖಂಡ, ಜೂಸ್, ವೈನ್, ಒಣಗಿರುವಂತಹ ಹಲಸಿನ ಹಣ್ಣಿನ ತೊಳೆಗಳು, ಬೀಜಗಳಿಂದ ಮಾಡಿದ ಚಟ್ನಿ ಪುಡಿ, ಬಿಸ್ಕೆಟ್ ಇನ್ನು ಹಲವಾರು ಖಾದ್ಯಗಳನ್ನು ಹಾಗು ಹಲಸಿನ ಬೆಳೆಗೆ ಮತ್ತು ಹಲಸಿನ ಖಾದ್ಯಗಳಿಗೆ ಸಂಬಂಧ ಪಟ್ಟ ಹಲವು ಪುಸ್ತಕಗಳನ್ನು ಪ್ರದರ್ಶಿಸಲಾಗಿತ್ತು. ಈ ಮೇಳವನ್ನು ನೋಡಲು ಬಂದಿರುವವರು ವಿವಿಧ ಹಲಸಿನ ಹಣ್ಣುಗಳ ಆಕಾರ, ತೊಳೆಗಳ ಬಣ್ಣ, ಮರಗಳ ಇತಿಹಾಸಗಳನ್ನು ತಿಳಿದು ಬೆರಗಾಗಿದ್ದಾರೆ. ಸುಮಾರು 20 ರಿಂದ 25 ತಳಿಗಳನ್ನು ಪ್ರದರ್ಶಿಸಿದ್ದು, ಕೆಲವು ತಳಿಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಸೂರ್ಯ ಹಲಸು - 450 ವರ್ಷ ಹಳೆಯದಾದ ಈ ಹಲಸಿನ ಮರವು ದೊಡ್ಡಬಳ್ಳಾಪುರದ ತೂಬಗೆರೆ ಹೋಬಳಿಯ ಮುನಿಯಪ್ಪನವರಿಗೆ ಸೇರಿದೆ.

ಸರ್ವಋತು ಹಲಸು - ಹೆಸರೇ ಸೂಚಿಸುವಂತೆ ಈ ತಳಿಯು ವರ್ಷವಿಡೀ ಫಲ ಕೊಡುತ್ತದೆ. ತೊಟ್ಟಿಗೆ ಒಂದೇ ಕಾಯಿ. ಮರದಲ್ಲೇ ಹಣ್ಣಾಗುತ್ತದೆ ಅಥವ ಬಲಿತ ಕಾಯಿ ಮರದಿಂದ ಇಳಿಸಿದ 2-3 ದಿನಗಳಲ್ಲಿ ಹಣ್ಣಾಗುತ್ತದೆ. ಇಳುವರಿ 300 ರಿಂದ 400 ಕಾಯಿಗಳು. ಕಡಿಮೆ ಅಂಟನ್ನು ಹೊಂದಿದ್ದು 12-18ಕೆಜಿ ಯವರೆಗೆ ತೂಗುತ್ತವೆ. ಹೆಚ್ಚು ರುಚಿಯಾದ ಬಿಳಿ ಬಣ್ಣದ ಮಧ್ಯಮ ಗಾತ್ರದ ಸುಮಾರು 100 ರಿಂದ 120 ತೊಳೆಗಳಿಂದ ಕೂಡಿವೆ.

ಒನಕೆ ಹಲಸು - ಒನಕೆ ತರಹ ಆಕಾರವನ್ನು ಹೋಲುವ ಈ ತಳಿಯು ವರ್ಷಕ್ಕೆ ಎರಡು ಬಾರಿ ಫಲಕೊಡುತ್ತದೆ. ತೊಟ್ಟಿಗೆ 4-5 ಕಾಯಿಗಳಿರುತ್ತವೆ. ಮರದಲ್ಲೇ ಹಣ್ಣಾಗುತ್ತವೆ ಅಥವಾ ಮರದಿಂದ ಇಳಿಸಿದ 2-3 ದಿನಗಳಲ್ಲಿ ಹಣ್ಣಾಗುತ್ತವೆ. ಇಳುವರಿ 100ಕ್ಕಿಂತ ಜಾಸ್ತಿ. 10 ರಿಂದ 35 ಕೆಜಿಯವರೆಗೆ ತೂಗುತ್ತವೆ.

ಕೆಂಪು ರುದ್ರಾಕ್ಷಿ ಹಲಸು - ಈ ತಳಿಯ ಮರದಲ್ಲಿ ಕಾಯಿಗಳು ತೊಟ್ಟಿಗೆ 7-8 ಇರುತ್ತವೆ. ಇಳುವರಿ ವರ್ಷಕ್ಕೆ 250 ರಿಂದ 300 ಕಾಯಿಗಳು. ಕಡಿಮೆ ಅಂಟನ್ನು ಹೊಂದಿದ್ದು ತೊಳೆಗಳು ಕೆಂಪು ಬಣ್ಣದಿಂದ ಕೂಡಿವೆ. 2-3 ಕೆಜಿ ತೂಗುವ ಈ ಹಣ್ಣುಗಳಲ್ಲಿ 15-20 ತೊಳೆಗಳಿರುತ್ತವೆ.

ಹೀಗೆ ಇತರ ತಳಿಗಳಾದ ದೊಡ್ಡ ಆನಿಗ, ಬಿಳಿ, ಹಳದಿ ರುದ್ರಾಕ್ಷಿ, ಮೊಟ್ಟವರಿಕೆ ಹಲಸು, ಸ್ವರ್ಣ ಹಲಸು, ಕೆಂಪು ಚಂದ್ರ ಬಕ್ಕೆ ಇನ್ನು ಮುಂತಾದ ತಳಿಗಳು ಪ್ರದರ್ಶನದಲ್ಲಿದ್ದು ಹಲವು ರೈತರು ಹಲಸಿನ ಅನೇಕ ಮಾಹಿತಿಗಳನ್ನು ತಿಳಿದುಕೊಂಡಿದ್ದಾರೆ.

ಪುರುಷೋತ್ತಮ ಸನ್ಮಾನ

ಪ್ರತಿ ವರ್ಷದಂತೆ ಈ ವರ್ಷವೂ ಕೃಷಿಋಷಿ ದಿವಂಗತ ಪುರುಷೋತ್ತಮ ರಾಯರ ಸವಿನೆನಪಿನಲ್ಲಿ 'ಪುರುಷೋತ್ತಮ ಸನ್ಮಾನ 'ಕಾರ್ಯಕ್ರಮವು ಸೆಪ್ಟೆಂಬರ್ 18, 2010 ರಂದು ಕೃಷಿ ನಿವಾಸ, ಕುರುವಳ್ಳಿ, ತೀರ್ಥಹಳ್ಳಿಯಲ್ಲಿ ನಡೆದಿರುತ್ತದೆ. ಈ ಸಾಲಿನಲ್ಲಿ ಗೋಪಾಲನೆ ಮತ್ತು ಸಾವಯವ ಕೃಷಿಯಲ್ಲಿ ಸಾಧನೆ ಮಾಡಿರುವ ಸಾಧಕ ಕುಟುಂಬಕ್ಕೆ ಸನ್ಮಾನ ಮಾಡಬೇಕೆಂದು ತೀರ್ಮಾನಿಸಲಾಗಿದ್ದು ಈ ಹಿನ್ನೆಲೆಯಲ್ಲಿ ಸಾಧನೆ ಮಾಡಿರುವ ಅರಸೀಕೆರೆ ಹತ್ತಿರದ ಕಲ್ಯಾಡಿಯವರಾದ ಬಸವರಾಜುರವರು ಪುರುಷೋತ್ತಮ ನಮನ ಕಾರ್ಯಕ್ರಮದಲ್ಲಿ ಗೌರವಾನ್ವಿತರಾಗಿದ್ದಾರೆ. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪಿ.ವಿ. ಕೃಷ್ಣಭಟ್ಟರು ಪಾಲ್ಗೊಂಡಿದ್ದರು.

ಗದಗಯ್ಯನವರ ಮತ್ತಷ್ಟು ಅನುಶೋಧನೆಗಳು

ವಿಜಾಪುರ ಜಿಲ್ಲೆಯ, ಬಸವನ ಬಾಗೇವಾಡಿ ತಾಲ್ಲೂಕಿನ ಯಳವಾರ ಗ್ರಾಮದವರಾದ ಗದಗಯ್ಯ ಹಿರೇಮಠರವರು ದೇಶೀ ತಂತ್ರಜ್ಞಾನ ಬಳಸಿ ಮನೆಯಲ್ಲಿಯೇ ಹಲವು ಕೃಷಿ ಯಂತ್ರೋಪಕರಣಗಳನ್ನು ತಯಾರಿಸಿದ್ದಾರೆ. ಹಿಂದಿನ ಸಂಚಿಕೆಯಲ್ಲಿ ಇವರ ಕೆಲವು ಅನುಶೋಧನೆಗಳನ್ನು ಕೊಡಲಾಗಿದ್ದು, ಈ ಸಂಚಿಕೆಯಲ್ಲಿ ಮತ್ತಷ್ಟು ಅವರ ಅನುಶೋಧನೆಗಳ ವಿವರಗಳನ್ನು ಕೊಡಲಾಗಿದೆ.

1. ಕಳೆ ತೆಗೆಯುವ ಸಾಧನ

ಗದಗಯ್ಯನವರು 1990 ರಲ್ಲಿ ಸೈಕಲ್‌ನ ಹ್ಯಾಂಡಲ್ ಹಾಗೂ ಗಾಲಿಯನ್ನು ಉಪಯೋಗಿಸಿಕೊಂಡು ಕೈ ಚಾಲಿತ ಕಳೆ ತೆಗೆಯುವ ಸಾಧನವನ್ನು ತಯಾರಿಸಿದ್ದರು. ಇದರ ಕಾರ್ಯ ಹತ್ತು ಜನ ಹೆಣ್ಣುಮಕ್ಕಳು ಮಾಡುವ ಕೆಲಸಕ್ಕೆ ಸಮನಾಗಿತ್ತು. ಇದನ್ನು ಉಪಯೋಗಿಸಿಕೊಂಡು ಒಂದು ಕೂಲಿ ಆಳಿನಿಂದ 18 ಇಂಚು ಸಾಲುಗಳಲ್ಲಿ 8 ಗಂಟೆಗಳಲ್ಲಿ ಒಂದು ಎಕರೆ ಕೆಲಸ ಮಾಡಲಾಗುತ್ತಿತ್ತು. ಬೆಳೆ ಸಾಲಿನಲ್ಲಿ ಹ್ಯಾಂಡಲ್ ತೊಂದರೆಯಾಗುತ್ತದೆ. ಹ್ಯಾಂಡಲ್ ಬಿಟ್ಟು ಬೇರೆ ವಿಧಾನ ಅಳವಡಿಸಿದರೆ ಒಳ್ಳೆಯದು ಎಂಬ ಸೂಚನೆ ರೈತರಿಂದ ಬಂದ ಮೇಲೆ ಗದಗಯ್ಯನವರು 1991 ರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಹೊಸ ಕಳೆ ತೆಗೆಯುವ ಸಾಧನವನ್ನು ತಯಾರಿಸಿದರು. ಹ್ಯಾಂಡಲ್ ಬಿಟ್ಟ ಕಾರಣ ಹಣ, ಶ್ರಮ ಮತ್ತು ಸಮಯಗಳ ಉಳಿತಾಯದ ಜೊತೆಗೆ ಗಟ್ಟಿ ಟಯರ್ ಇರುವ ಕಾರಣ ಪಂಚರ್ ಆಗುವ ಸಂಭವ ಕಡಿಮೆ ಆಗಿದೆ. ಹಾಗಾಗಿ ಈ ಸಾಧನ ಅನೇಕ ರೈತರಿಂದ ಮೆಚ್ಚುಗೆಯನ್ನು ಪಡೆದಿದೆ ಎಂದು ಗದಗಯ್ಯನವರು ಹೇಳಿದ್ದಾರೆ.

2. ಸಾಧನ ಒಂದು, ಉಪಯೋಗಗಳು ಮೂರು !


ಗದಗಯ್ಯನವರು ತಯಾರಿಸಿರುವ ಈ ಸಾಧನವು ಕಳೆ ತೆಗೆಯಲು, ಎರಡು ಸಾಲಿಗೆ ಗೊಬ್ಬರ ಹಾಕಲು ಹಾಗೂ ಒಂದು ಸಾಲು ಬೀಜ ಗೊಬ್ಬರ ಬಿತ್ತಲು ಉಪಯೋಗವಾಗುತ್ತದೆ.



30 ಕೆಜಿ. ಭಾರವಿರುವ ಇದನ್ನು ಎರಡು ಆಳುಗಳು ಒಂದು ದಿನಕ್ಕೆ ಎರಡು ಎಕರೆ ಬಿತ್ತಬಹುದು. ಶೇಂಗಾ ಹಾಗೂ ಉಳ್ಳಾಗಡ್ಡಿ ಬಿತ್ತಿದ ಹೊಲದಲ್ಲಿ ಕೆಲವು ದಿನಗಳ ನಂತರ ಇತರ ಬೆಳೆಗಳಾದ ಜೋಳ, ಕಡಲೆ ಬಿತ್ತಲು ಅನುಕೂಲವಾಗುವುದು. ಮೊದಲು ಬಿತ್ತಿದ ನಾಟಿಗಳ ಸಾಲಿನ ಮಧ್ಯದಲ್ಲಿ ಬೇರೆ ಬೀಜವನ್ನು ಎಳೆದು ಬಿತ್ತುವುದರಿಂದ ಮೊದಲಿನ ಬೆಳೆಯು ಹಾಳಾಗುವುದಿಲ್ಲ.

3. ಸ್ಪ್ರೇಯರ್ ಮತ್ತು ಡಸ್ಟರ್

ಈಗ ಕೃಷಿಯಲ್ಲಿ ಸಸ್ಯ ಸಂರಕ್ಷಣೆ ಒಂದು ಮುಖ್ಯವಾದ ಕೆಲಸ. ಅದಕ್ಕಾಗಿ ರೈತರು ಸ್ಪ್ರೇಯರ್ ಹಾಗೂ ಡಸ್ಟರ್ ಬಳಸುವುದು ಸಹಜ. ಆದರೆ ಸಿಂಪಡಣಾ ಸಮಯದಲ್ಲಿ ಔಷಧ, ಪೌಡರ್ ಹಾಗೂ ವಸ್ತುವಿನ ಭಾರ ವ್ಯಕ್ತಿಯ ಮೇಲೆ ಬೀಳಬಾರದೆಂದು ಸೈಕಲ್ ಗಾಲಿಯ ಮೇಲೆ ಸ್ಪ್ರೇಯರ್ ಹಾಗೂ ಡಸ್ಟರ್ ಅಳವಡಿಸಲಾಗಿದೆ. ಇವು ಕೈ ಚಾಲಿತ ಸಾಧನಗಳಾಗಿವೆ. ವ್ಯಕ್ತಿಯು ಭಾರ ಹೋರುವ ಅವಶ್ಯಕತೆ ಇಲ್ಲದಿರುವುದರಿಂದ ಶ್ರಮ ಕಡಿಮೆ ಆಗಿ ಹೆಚ್ಚು ಕೆಲಸ ಮಾಡಬಹುದು.



ಸ್ಪ್ರೇಯರ್ : ಇದನ್ನು ಒಬ್ಬ ವ್ಯಕ್ತಿ ಒಂದು ದಿನದಲ್ಲಿ 4 ಎಕರೆ ಸಿಂಪಡಣೆ ಮಾಡಬಹುದು. ಏಕಕಾಲಕ್ಕೆ ಬೆಳೆಗಳಿಗೆ ಸಿಂಪಡಿಸಬಹುದು. ವಿಷ ದ್ರಾವಣವು ವ್ಯಕ್ತಿಯ ಮುಖಕ್ಕಾಗಲಿ, ಮೈ ಮೇಲಾಗಲಿ ಬೀಳುವುದಿಲ್ಲ.

ಡಸ್ಟರ್ : ಇಬ್ಬರು ವ್ಯಕ್ತಿಗಳಿಂದ ಒಂದು ದಿನದಲ್ಲಿ ಎಂಟು ಎಕರೆ ಧೂಳೀಕರಿಸಬಹುದು. ಹತ್ತು ಜನ ಮಾಡುವ ಕೆಲಸವನ್ನು ಇಬ್ಬರೇ ಮಾಡಬಹುದು. ಧೂಳೀಕರಿಸುವಾಗ ಧೂಳು ಮುಖಕ್ಕೆ ರಾಚುವುದಿಲ್ಲ, ಗಟ್ಟಿಯಾದ ಟಯರ್ ಇರುವುದರಿಂದ ಪಂಚರ್ ಆಗುವ ಸಾಧ್ಯತೆ ಕಡಿಮೆ.

4. ಎತ್ತಿನಿಂದ ಎಡೆ ಹೊಡೆಯುವ ಸಾಧನ

ಈ ಸಾಧನವನ್ನು ಕಬ್ಬಿಣದಿಂದ ಮಾಡಿದ್ದು 10 ಕೆಜಿ.ಭಾರವಿದೆ. ಇದು ಎರಡು ಬೆಳೆಗಳ ಮಧ್ಯ ಸಾಲಿನಲ್ಲಿ ಮಧ್ಯಂತರ ಬೇಸಾಯ ಮಾಡುವುದಕ್ಕೆ ಅನುಕೂಲವಾಗಿದೆ. ಒಂದು ಜೋಡಿ ಎತ್ತುಗಳು ಏಕಕಾಲಕ್ಕೆ 3 ಎಡೆ ಕುಂಟೆಗಳನ್ನು ಎಳೆಯಲು ಸುಲಭವಾಗಿದೆ. 12 ಇಂಚು ಸಾಲಿನಿಂದ 18 ಇಂಚು ಸಾಲುಗಳವರೆಗೆ ಕುಳಗಳ ಬದಲಾವಣೆಗೆ ಇದರಲ್ಲಿ ವ್ಯವಸ್ಥೆ ಇದೆ. ಇದರ ಉಪಯೋಗವನ್ನು ಬಹಳಷ್ಟು ಜನ ಪಡೆದುಕೊಳ್ಳುತ್ತಿದ್ದಾರೆ.

5. ಕಬ್ಬಿನಲ್ಲಿ ಮಧ್ಯಂತರ ಬೇಸಾಯ ಮಾಡುವ ಕುಂಟೆ

ಇದನ್ನು ಕಬ್ಬಿಣದಿಂದ ತಯಾರಿಸಿದ್ದು, 30 ಕೆಜಿ. ತೂಕವಿದೆ. ಈ ಸಾಧನಕ್ಕೆ ಮುಂದೆ ಒಂದು ಚಕ್ರವನ್ನು ಅಳವಡಿಸಿದ ಕಾರಣ ಎಷ್ಟೇ ಭಾರ ಬಿದ್ದರೂ ಎತ್ತುಗಳು ಸರಾಗವಾಗಿ ಎಳೆಯುತ್ತವೆ. ಈ ಸಾಧನವನ್ನು ಅನೇಕ ರೈತರು ಉಪಯೋಗಿಸುತ್ತಿದ್ದಾರೆ.

ತುಮಕೂರು ಜಿಲ್ಲೆ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಹಂದನಕೆರೆಯ ವಿನೋದ್‌ರವರು ಬಿ.ಎ. ಪದವಿಯವರೆಗೆ ಓದಿದ್ದು ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಈಗಿನ ದಿನಗಳಲ್ಲಿ ಎಳನೀರನ್ನು ತಂಪಾಗಿಸಿ ಮೌಲ್ಯವರ್ಧಿಸಿ ಮಾರಾಟ ಮಾಡಲು ಆಧುನಿಕ ಸಾಧನಗಳು ಚಾಲ್ತಿಯಲ್ಲಿದ್ದರೂ ವಿನೋದ್‌ರವರು ತಮ್ಮದೇ ಸರಳ ತಂತ್ರಜ್ಞಾನದಲ್ಲಿ, ಕಡಿಮೆ ಬೆಲೆಯಲ್ಲಿ ಈ ಕಾರ್ಯ ಕೈಗೊಳ್ಳುವ ಒಂದು ಸಾಧನವನ್ನು ತಯಾರಿಸಿದ್ದಾರೆ. ಈ ಸಾಧನ ತಯಾರಿಸುವ ವಿಧಾನವು ಅವರಿಗೆ ಹೊಳೆದದ್ದು ಕೆಲವು ತಿಂಗಳುಗಳ ಹಿಂದೆ ಹೈದರಾಬಾದಿನಲ್ಲಿ ಎಳನೀರನ್ನು ತಂಪಾಗಿಸಲು ಯುವಕರಿಬ್ಬರು ಯಾವುದೇ ಶಕ್ತಿಯ ಅವಲಂಬನೆಯಿಲ್ಲದೆ ಕ್ಷಣಾರ್ಧದಲ್ಲಿ ಎಳನೀರನ್ನು ಗ್ರಾಹಕರಿಗೆ ತಲುಪಿಸುವ ರೀತಿ ನೋಡಿದ ನಂತರ. ಆ ಘಟಕದ ತಂತ್ರಜ್ಞಾನವನ್ನು ತಿಳಿದುಕೊಂಡ ವಿನೋದ್‌ರವರು ಇದನ್ನೇ ಇನ್ನಷ್ಟು ಸರಳವಾಗಿಸಿ ಸ್ಥಳೀಯವಾಗಿ ಸಿಗುವಂತಹ ಸಂಪನ್ಮೂಲಗಳನ್ನು ಬಳಸಿ ಎಳನೀರು ಬೆಳೆದ ಬೆಳೆಗಾರರಿಗೆ ಅಧಿಕ ಬೆಲೆ ಸಿಗುವಂತೆ ಮಾಡಿದ್ದಾರೆ.

ಒಂದೂವರೆ ಅಡಿ ಅಗಲ, ಎರಡು ಅಡಿ ಉದ್ದ ಎರಡು ಅಡಿ ಆಳದ ತಗಡಿನ ಡಬ್ಬಕ್ಕೆ ಒಳ ಭಾಗದಲ್ಲಿ ನಾಲ್ಕು ಕಡೆಗೂ ಥರ್ಮೋಕೋಲ್ ಶೀಟ್ ಜೋಡಿಸಲಾಗಿದೆ. ತಳಭಾಗದಲ್ಲಿ ಅರ್ಧ ಅಡಿಯವರೆಗೆ ಮರಳನ್ನು ಹಾಕಿ ನಂತರ ಮರಳಿನ ಮೇಲೆ ಐಸ್ ಗಟ್ಟಿಗಳಿಂದ ಡಬ್ಬವನ್ನು ತುಂಬಿಸಲಾಗುತ್ತದೆ. ಈ ಐಸ್‌ಗಟ್ಟಿಗಳ ನಡುವೆ ಮುಕ್ಕಾಲು ಇಂಚಿನ ಮೃದು ಪ್ಲಾಸ್ಟಿಕ್ ಕೊಳವೆಯನ್ನು ಸೇರಿಸಲಾಗುತ್ತದೆ. ಈ ಕೊಳವೆಯ ಒಂದು ತುದಿಗೆ ಆಲಿಕೆಯನ್ನು ಜೋಡಿಸಿ ಡಬ್ಬದ ಬಾಯಿಯ ಮೇಲೆ ಬರುವಂತೆ ಮಾಡಿ ಉಳಿದ ಭಾಗವನ್ನು ಡಬ್ಬದ ಕೆಳಗಿರುವ ರಂಧ್ರದ ಮೂಲಕ ಬರುವ ಇನ್ನೊಂದು ತುದಿಗೆ ನಲ್ಲಿಯನ್ನು ಜೋಡಣೆ ಮಾಡಲಾಗಿದೆ. ಈಗ ಆಲಿಕೆಗೆ ಎಳನೀರನ್ನು ಹಾಕಿದರೆ, ಎಳನೀರು ಐಸ್‌ಗಟ್ಟಿಗಳ ನಡುವೆ ಹಾದುಹೋದ ಕೊಳವೆಯ ಮೂಲಕ ನಿಧಾನವಾಗಿ ಇಳಿದು ನಳದ ಮೂಲಕ ಹೊರ ಬರುತ್ತದೆ. ಈ ರೀತಿ ತಂಪಾಗಿ ಹೊರಬರಲು ಒಂದು ನಿಮಿಷ ಸಾಕಂತೆ. ಈ ಎಳನೀರಿಗೆ ರುಚಿ ಹೆಚ್ಚಿಸಲು ಉಪ್ಪು, ಶುಂಠಿಪುಡಿ ಅಥವಾ ಮಸಾಲೆ ಬೆರೆಸಲಾಗುತ್ತದೆ. ಇದು ಗ್ರಾಹಕ ಸ್ನೇಹಿ ಹಾಗೂ ಆರೋಗ್ಯಕ್ಕೂ ಉತ್ತಮ ಎನ್ನುವ ವಿನೋದ್‌ರವರು ಈ ಸಾಧನಕ್ಕೆ ಪ್ಲಾಸ್ಟಿಕ್ ಕೊಳವೆ, ಆಲಿಕೆ, ಮಂಜುಗಡ್ಡೆ ಮತ್ತು ಮರಳು ಈ ಎಲ್ಲಾ ಸೇರಿ 150-200 ರೂಪಾಯಿ ಖರ್ಚಾಗಬಹುದು. ಆದರೆ ಪ್ರತಿದಿನ ಪ್ಲಾಸ್ಟಿಕ್ ಕೊಳವೆಯನ್ನು ಶುಚಿಮಾಡಬೇಕು, ಇಲ್ಲದಿದ್ದರೆ ಪಾಚಿಕಟ್ಟುವ ಸಾಧ್ಯತೆ ಇರುತ್ತದೆ ಎಂದು ಹೇಳಿದ್ದಾರೆ.

ಎಳನೀರು ತಂಪಾಗಿಸುವ ಈ ಸಾಧನವನ್ನು ವಿನೋದ್‌ರವರು ಬೆಂಗಳೂರಿನಲ್ಲಿ ಕಳೆದ ಬಾರಿ ನಡೆದ ಮೂರು ದಿನಗಳ ಕೃಷಿಮೇಳದಲ್ಲಿ ಉಪಯೋಗಿಸಿ ಒಂದು ಸಾವಿರ ಎಳನೀರನ್ನು ತಂಪಾಗಿಸಿ ಗ್ರಾಹಕರಿಗೆ ಕೊಟ್ಟಿದ್ದಾರೆ. ಅಲ್ಲದೆ ಈ ಸಾಧನ ತಯಾರಿಕಾ ವಿಧಾನವನ್ನು ಇತರ ರೈತರಿಗೆ ಪರಿಚಯಿಸಿದ್ದಾರೆ. ಇನ್ನು ಹೆಚ್ಚಿನ ವಿವರಗಳಿಗೆ ವಿನೋದ್‌ರವರನ್ನು 9448357536 ಗೆ ಸಂಪರ್ಕಿಸಬಹುದು.

ಪಾಟೀಲರ ರೆಡಿಮೇಡ್ ಗೋಧಿಹುಲ್ಲಿನ ರಸ

ಗೋಧಿ ಹುಲ್ಲಿನ ರಸ ಸೇವನೆಯಿಂದ ಹತ್ತಾರು ಕಾಯಿಲೆಗಳು ನಿವಾರಣೆ ಯಾಗುತ್ತವೆ ಎಂದು ಹೇಳಲಾಗಿದೆ. ಅಂತರ್ಜಾಲದಲ್ಲೂ ಈ ಬಗ್ಗೆ ಮಾಹಿತಿಗಳಿವೆ. ಆದರೆ ದಿನಾಲೂ ತಾಜಾ ಹುಲ್ಲಿನ ರಸ ಎಲ್ಲಿಂದ ಸಿಗಬೇಕು? ಈ ಕೊರತೆ ಅರಿತ ಬೆಳಗಾವಿಯ ಎಸ್.ಎಮ್. ಪಾಟೀಲರು ಗೋಧಿಯ ಎಳೆ ಸಸಿ ಬೆಳಸಲು ಮುಂದಾದರು. ಮಿತ್ರ ಅರವಿಂದ ದೇಶಪಾಂಡೆ ಖರೀದಿಸಿ ತಂದ ಉತ್ಪನ್ನವೇ ಇದಕ್ಕೆ ಪ್ರೇರಣೆ. ತಿಂಗಳಲ್ಲಿ ಮೂರು ಬೆಳೆ. ಪ್ರತಿ ಬಾರಿ ಎರಡು ಕಿಲೋ ಬೀಜ ಬಿತ್ತನೆ. ವಾರದ ನಂತರ ಕಿತ್ತು ತೊಳೆದು ನೆರಳಿನಲ್ಲಿ ಒಣಗಿಸಿ ಪುಡಿ ಮಾಡಬೇಕು. ಎರಡು-ಮೂರು ಕಿಲೋ ಸಿಗುತ್ತದೆ. ಇದನ್ನು ಗೋಧಿಯ 'ಬೀಜಾಂಕುರ' ಹೆಸರಿನಲ್ಲಿ ಮಾರಾಟ ಮಾಡಲು ಪಾಟೀಲರು ಮುಂದಾಗಿದ್ದಾರೆ. ದಿನಾಲೂ ಬೆಳಿಗ್ಗೆ ಒಂದು ಗ್ರಾಮ್ ಪುಡಿಯನ್ನು ತುಪ್ಪ, ಜೇನುತುಪ್ಪ ಅಥವಾ ನೀರು ಸೇರಿಸಿ ತೆಗೆದುಕೊಳ್ಳಬೇಕು. "ಮೊಮ್ಮಕ್ಕಳಿಂದ ನನ್ನವರೆಗೆ ಎಲ್ಲರೂ ತಪ್ಪದೆ ತಗೋತೀವಿ. ಅದಕ ನಮ್ಮ ಹತ್ತಿರ ಯಾವುದೇ ರೋಗ ಸುಳಿಯುವುದಿಲ್ಲ ನೋಡಿ." ಎನ್ನುವುದು ಪಾಟೀಲರ ಅನುಭವದ ಮಾತು.

ಮೂಲ : ಲೀಲಾ ನಾ. ಕೌಜಗೇರಿಯವರ ಮಿಶ್ರಕೃಷಿ-ಮೌಲ್ಯವರ್ಧನೆ-ನೇರ ಮಾರುಕಟ್ಟೆ ಪುಸ್ತಕದಿಂದ (ವಿಮರ್ಷೆ ಪುಟ 12 ರಲ್ಲಿ)

ಹುಳಿಚಿಕ್ಕ (*Oxalis corniculata, L.*) ಗಿಡವು ನಮಗೆ ಪರಿಚಿತವಾದ ಪಾಲಕ್ ಸೊಪ್ಪಿನ ತರಹ ಹೋಲಿಕೆ ಇದೆ. ಸುಮಾರು ಒಂದು ಅಡಿ ಬೆಳೆವ ಇದು ಚಿಕ್ಕ ಸಸ್ಯ. ಪರ್ಯಾಯ ಎಲೆ ಜೋಡಣೆ. ಉದ್ದದಂಟಿಗೆ ಚಮಚೆ ಆಕಾರದ ರಚನೆಯ ಮೃದುವಾದ ಮಿಂಚುವ ಎಲೆ. ಉದ್ದ ತೊಟ್ಟಿನ ನಸುಗೆಂಪು ಬಣ್ಣದ ಹೂಗೊಂಚಲು. ಇದು ಮೂಲತಃ ಹಿಮಾಲಯದ ತೇವ ಭೂಮಿಯ ಹುಲ್ಲುಗಾವಲಿನ ಕಳೆ ಗಿಡ. ಇಂದು ಆಹಾರಕ್ಕೆ ಬೆಳೆಯುವ ಸೊಪ್ಪಾಗಿದ್ದು ಕ್ಷಯರೋಗ, ಮೂಲವ್ಯಾಧಿ, ಪದೇ ಪದೇ ತಲೆ ದೋರುವ ಆಮಶಂಕೆ, ಭೇದಿ, ರಕ್ತಭೇದಿ ಪರಿಹಾರಕ್ಕೆ ಹುಳಿಚಿಕ್ಕ ಔಷಧಿಯಾಗಿ ಬಳಕೆಯಾಗುತ್ತಿದೆ. ಇದರಲ್ಲಿ ಶೇಕಡಾ 22 ರಷ್ಟು ಓಕ್ಸಾಲಿಕ್ ಆಮ್ಲ ಇರುವುದರಿಂದ ಅತಿ ಬಳಕೆಯೂ ಒಳ್ಳೆಯದಲ್ಲವಂತೆ. ಅಂದಿನ ವೈದ್ಯ ಚರಕ ಹೇಳಿರುವಂತೆ ಹುಳಿಚಿಕ್ಕ ಎಲೆಗಳಿಂದ ತಂಬುಳಿ ಮಾಡುವ ಮಾಹಿತಿಯನ್ನು ಅಲ್ಲದೆ ವಿಷ ಜಂತು ಕಡಿತದ ಗಾಯದ ಉರಿ, ಉರಿಯೂತ ತಡೆಗೆ ಹುಳಿಚಿಕ್ಕ ಎಲೆಗಳನ್ನು ಅರೆದು ಲೇಪಿಸುವಂತೆ ಹೇಳಿದ್ದಾರೆ. ಇನ್ನೊಬ್ಬ ಗ್ರಂಥಕಾರರಾದ ಭಾವಮಿಶ್ರನ ಪ್ರಕಾರ, ಹುಳಿಚಿಕ್ಕ ಎಲೆಯು ಐದು ಬಗೆಯ ಹುಳಿವಸ್ತುಗಳ ಪೈಕಿ ಒಂದು. ಕಫ ಮತ್ತು ಪಿತ್ತ ರೋಗ ಪರಿಹಾರಿ, ಬಾಯಿ ರುಚಿ ಹೆಚ್ಚಿಸುತ್ತದೆ. ಉರಿಮೂತ್ರ, ವಾಂತಿ, ಜಠರದ ಉರಿ ಮತ್ತು ಆಮಶಂಕೆಗೆ ಒಳ್ಳೆಯ ಔಷಧಿ ಮತ್ತು ಬದನೆಯ ಅಡುಗೆಗೆ ಹುಳಿಚಿಕ್ಕದ ಬಳಕೆ ಹೇಳಿಮಾಡಿಸಿದ್ದು ಎಂದು ತಿಳಿಸಿದ್ದಾರೆ.

ಹುಣಸೆ, ನಿಂಬೆ ಮತ್ತು ಟೊಮೆಟೊದಂಥವು ಹುಳಿವಸ್ತುಗಳು. ವಾಯು ನೋವಿಗೆ ಹುಣಸೆ, ಟೊಮೆಟೊ ಹಾಗು ಮೂತ್ರದ ಮತ್ತು ಪಿತ್ತಕೋಶದ ಕಲ್ಲಿನ ತೊಂದರೆ, ತೊನ್ನು ಉಳ್ಳವರು ಹುಣಸೆಯನ್ನು ಉಪಯೋಗಿಸುವುದು ಒಳ್ಳೆಯದಲ್ಲ. ಆದರೆ ಹುಳಿಚಿಕ್ಕವನ್ನು ಹಿತಮಿತವಾಗಿ ಅಡುಗೆಯಲ್ಲಿ ಬಳಸಿದರೆ ಆರೋಗ್ಯಕ್ಕೆ ಒಳ್ಳೆಯದಂತೆ.

ಮೂಲ : ವಿಜಯ ಕರ್ನಾಟಕ, 23 ಜನವರಿ 2008

ಹಸುಗಳ ಹೊಟ್ಟೆ ಉಬ್ಬರಕ್ಕೆ

ತಮಿಳುನಾಡಿನ, ಈರೋಡ್ ಜಿಲ್ಲೆಯ, ಸಿ.ಕೆ.ನಾಚಿಮುತ್ತುರವರು ನಾಟಿ ವೈದ್ಯರಾಗಿದ್ದು ಹಸುಗಳಲ್ಲಿ ಕಂಡುಬರುವಂತಹ ಹೊಟ್ಟೆ ಉಬ್ಬರಕ್ಕೆ ಒಂದು ನೂತನ ರೀತಿಯಲ್ಲಿ ಚಿಕಿತ್ಸೆಯನ್ನು ಕೊಡುತ್ತಾರೆ. ಇದಕ್ಕಾಗಿ ಅವರು 50ಗ್ರಾಂ. ವಿಷ ಉಮ್ಮತ್ತಿ (*Datura metel L.*), 50ಗ್ರಾಂ. ಬಜೆ (*Acorus calamus L.*) ಮತ್ತು ಅಶ್ವಗಂಧ ಬೇರು (*Withania somnifera (L.) Dunal*) ಇವುಗಳ ಮಿಶ್ರಣದಿಂದ ಮಾಡಿರುವ ಕಷಾಯವನ್ನು ಅಸ್ವಸ್ಥವಾಗಿರುವ ಹಸುವಿಗೆ ಕುಡಿಸುತ್ತಾರೆ.

ವೈಜ್ಞಾನಿಕ ಹಿನ್ನೆಲೆ: ವಿಷ ಉಮ್ಮತ್ತಿಯನ್ನು ಅಜೀರ್ಣತೆ ಉಪಶಮನ ಮಾಡುವುದಕ್ಕೆ ಉಪಯೋಗಿಸುವುದು ಈಗಾಗಲೇ ಪ್ರಕಟವಾಗಿದೆ. ವಿವರಕ್ಕೆ: Singh VK, Ali ZA, Zaidi, STH, Siddiqui MK. (1996); Fitoterapia Volume 67(2):Pages 129-139 ನೋಡಿರಿ. ಬಜೆಯನ್ನು ಅಜೀರ್ಣತೆಗೆ ಉಪಯೋಗಿಸಲಾಗುತ್ತಿದೆಯೆಂದು Motley (Motley, TJ. (1994); Acorus calamus (araceace). Econ bot Volume 48(4): Pages 397-412 ದಿಂದ ತಿಳಿದುಬಂದಿದೆ. ಅಶ್ವಗಂಧಿಯ ಬೇರು ಶಕ್ತಿವರ್ಧಕ ಗುಣಗಳನ್ನು ಒಳಗೊಂಡಿದೆ. ವಿವರಕ್ಕೆ: Garg LC, Parasar GC. (1965); Plant med Volume 13: Pages 46-47 ರಲ್ಲಿ ನೋಡಿರಿ. ಹಾಗೇ, ಹನಿ ಬೀ ಸಂಚಿಕೆ 17(4), 2006 ಮತ್ತು 18(1): 42, 2007ರಲ್ಲೂ ಇದರ ಬಗ್ಗೆ ವಿವರಗಳಿವೆ.

ಮೂಲ: *Honey Bee Vol 20(2) April - June 2009*

ಕಿತ್ತಳೆಯಿಂದ ಗಾಯಗಳ ಉಪಶಮನ

ಒರಿಸ್ಸಾದ ಮಯೂರ್‌ಭಂಜ್ ಜಿಲ್ಲೆಯ ಬುಡಕಟ್ಟು ಜನಾಂಗದವರು ಕಿತ್ತಳೆ ಗಿಡದ ಎಲೆಗಳನ್ನು ಉಪಯೋಗಿಸಿಕೊಂಡು ಹಸುಗಳಲ್ಲಿ ಆಗಿರುವ ಗಾಯಗಳಿಗೆ ಚಿಕಿತ್ಸೆಯನ್ನು ನೀಡುತ್ತಾರೆ. ಇವರಲ್ಲಿ ಒಬ್ಬರಾದ ದುರ್ಗಾಸಿಂಗ್ ಎಂಬುವರು ಬೊಗಸೆ ತುಂಬ ಕಿತ್ತಳೆ ಗಿಡದ ಎಲೆಗಳನ್ನು ಚೆನ್ನಾಗಿ ಅರೆದು ಗಾಯಗಳ ಮೇಲೆ ಲೇಪಿಸುತ್ತಾರೆ. ಈ ವಿಧಾನದಿಂದ ಗಾಯಗಳು ಬೇಗನೆ ಗುಣ ಮುಖವಾಗುತ್ತದೆಂದು ತಿಳಿದು ಬಂದಿದೆ. ಹಾಗು ಇದರ ಕಷಾಯವು ಕ್ರಿಮಿ ಕೀಟಗಳನ್ನು ಗಾಯಗಳ ಹತ್ತಿರ ಸುಳಿಯಲು ಬಿಡುವುದಿಲ್ಲವಂತೆ.



ವೈಜ್ಞಾನಿಕ ಹಿನ್ನೆಲೆ: ಕಿತ್ತಳೆಯು ಗಾಯಗಳನ್ನು ಗುಣಪಡಿಸುವಂತ ಗುಣಗಳನ್ನು ಹೊಂದಿದೆ ಎಂದು ಈಗಾಗಲೇ ದೃಡಪಟ್ಟಿದೆ. ವಿವರಕ್ಕೆ : Anbu, J., Vasuki, R., Shanmugasundaram, p., George, S. and Aanandhi, M.V. 2008. Analgesic, Antipyretic and Wound healing properties of Citrus sinensis peel extract Biomedicine. Volume 28 (2): page 117 - 120; www.biomedicineonline.org ರಲ್ಲಿ ನೋಡಿರಿ.

ಹೇನು ನಿವಾರಕವಾಗಿ ಕಿತ್ತಳೆ ಗಿಡದ ಕಷಾಯ

ಒರಿಸ್ಸಾದ ಇದೇ ಬುಡಕಟ್ಟು ಜನಾಂಗದವರು ಹಸುಗಳಲ್ಲಿ ಕಾಣಸುವಂತಹ ಹೇನುಗಳ ಹತೋಟಿಗೆ ಕಿತ್ತಳೆ ಹಣ್ಣಿನ ಗಿಡವನ್ನು ಉಪಯೋಗಿಸುತ್ತಾರೆ. ಕಿತ್ತಳೆ ಗಿಡದ ತಾಜಾ ಎಲೆಗಳಿಂದ ತಯಾರಿಸಿರುವ ಕಷಾಯವನ್ನು ಮಣ್ಣಿನ ಮಡಿಕೆಯಲ್ಲಿ ಎರಡು ದಿನಗಳವರೆಗೆ ಶೇಖರಿಸಿ ಇಡಲಾಗುತ್ತದೆ. ನಂತರ ಈ ಕಷಾಯವನ್ನು ಹೇನುಗಳಿರುವಂತಹ ಹಸುಗಳ ಮೇಲೆ ಲೇಪಿಸಿ ಎರಡು ದಿನಗಳಾದ ನಂತರ ಚೆನ್ನಾಗಿ ಸ್ನಾನ ಮಾಡಿಸಲಾಗುತ್ತದೆ. ಇದರಿಂದ ಹೇನುಗಳು ಸಾಯುತ್ತವೆ ಹಾಗು ಹತೋಟಿಯಲ್ಲಿರುತ್ತವೆ.

ವೈಜ್ಞಾನಿಕ ಹಿನ್ನೆಲೆ : ಸಿಟ್ರಸ್ ಹಣ್ಣುಗಳ ಸಿಪ್ಪೆಯಲ್ಲಿರುವ ಎಣ್ಣೆಯನ್ನು ನೇರವಾಗಿ ಹಚ್ಚುವುದರಿಂದ ಹಸುಗಳಲ್ಲಿರುವ ಹೇನುಗಳನ್ನು ಹತೋಟಿಯಲ್ಲಿಡಬಹುದು ಎಂಬುದು ದೃಡಪಟ್ಟಿದೆ. ವಿವರಕ್ಕೆ : Narong and Weerapol, 1996. J. Nat. Sci. Volume 30: page 112-117 ರಲ್ಲಿ ನೋಡಿರಿ. ಕಿತ್ತಳೆ ಹಣ್ಣಿನಲ್ಲಿಯೂ ಕೀಟನಾಶಕ ಗುಣಗಳಿವೆ. ವಿವರಕ್ಕೆ Yang Y.C., Lee H. S., Clark J.M. and Ahn Y.J., 2004. J. Med. Entomol.; Volume 41(4): page 699-704 ರಲ್ಲಿ ನೋಡಿರಿ.

ಹಸುಗಳಲ್ಲಿಯ ಪರೋಪಜೀವಿಗಳಿಗೆ ಪರಿಹಾರ

ಹಸುಗಳಲ್ಲಿ ಕಾಣಿಸಿಕೊಳ್ಳುವ ಹೇನು, ತಿಗಣೆ ಹಾಗು ಅನೇಕ ಪರೋಪ ಜೀವಿಗಳ ನಿಯಂತ್ರಣಕ್ಕೆ ಒರಿಸ್ಸಾದ, ಮಯೂರ್‌ಭಂಜ್ ಜಿಲ್ಲೆಯ, ಸಲಬಾನಿ ಊರಿನವರಾದ ಲಕ್ಷ್ಮಣ್ ನಾಯಕರವರು ಮುತ್ತುಗ (*Butea monosperma (Lamk.) Taub.*)ದ ಬೀಜಗಳನ್ನು ಅರೆದು ಚೂರ್ಣವನ್ನು ತಯಾರಿಸಿ ಕೊಳ್ಳುತ್ತಾರೆ. ಇದನ್ನು ಹಸುಗಳಿಗೆ ದಿನಕ್ಕೆ ಒಂದು ಬಾರಿಯಂತೆ ಮೂರು ದಿನಗಳವರೆಗೆ ಕೊಡುತ್ತಾರೆ. ಇದರಿಂದ ಎಲ್ಲ ಪರೋಪಜೀವಿಗಳು ಇಲ್ಲವಾಗುತ್ತದೆ ಎಂದು ಲಕ್ಷ್ಮಣ್‌ನವರು ಹೇಳಿದ್ದಾರೆ.

ವೈಜ್ಞಾನಿಕ ಹಿನ್ನೆಲೆ : ಸ್ವಲ್ಪ ಪ್ರಮಾಣದಲ್ಲಿ ಮುತ್ತುಗದ ಬೀಜಗಳನ್ನು ತೆಗೆದು ಕೊಳ್ಳುವುದರಿಂದ ಇದು ಅಣುಜೀವಿನಾಶಕವಾಗಿ, ಶಿಲೀಂದ್ರ ನಾಶಕವಾಗಿ ಮತ್ತು ಜಂತು ಔಷಧವಾಗಿ ಕೆಲಸಮಾಡುತ್ತದೆ ಎನ್ನುವ ವಿವರಕ್ಕೆ: Singh V.P., 2010, Butea monosperma. World Agroforestry Centre, NASC, New Delhi, India (http://www.worldagroforestry.org ; Juyal, P.D and Singla, L.D. Parasitic infections in livestock. ನೋಡಿರಿ.

ಸಂಧಿವಾತ ನೋವುಗಳ ಉಪಶಮನ

ಕರೀಗೊನ್ನೆ (*Celastrus paniculatus Wild.*) ಬಳ್ಳಿಯ ಬೀಜಗಳಿಂದ ತೆಗೆದಿರುವಂತಹ ಎಣ್ಣೆಯನ್ನು ಸಂಧಿವಾತ ನೋವುಗಳ ಚಿಕಿತ್ಸೆಗಾಗಿ ಉಪಯೋಗಿಸಲಾಗುತ್ತದೆ. ಒರಿಸ್ಸಾದ, ಮಯೂರ್‌ಬನ್ ಜಿಲ್ಲೆಯ ಗಡಿಯ ಊರಿನವರಾದ ಬಲರಾಮ್ ಸಿಂಗ್‌ನವರು ಕರೀಗೊನ್ನೆ ಬೀಜಗಳ ಎಣ್ಣೆಯನ್ನು ಮನುಷ್ಯರಲ್ಲಿ ಹಾಗು ಪ್ರಾಣಿಗಳಲ್ಲಿ ಕಾಣಸುವಂತಹ ಸಂಧಿವಾತ ನೋವಿನ ನಿವಾರಣೆಗಾಗಿ ಉಪಯೋಗಿಸುತ್ತಾರೆ.

ವೈಜ್ಞಾನಿಕ ಹಿನ್ನೆಲೆ: ಕರೀಗೊನ್ನೆ ಬಳ್ಳಿಯ ಬೀಜಗಳಿಂದ ತೆಗೆದಿರುವಂತಹ ಎಣ್ಣೆಯು ಸ್ನಾಯು ಸೆಳೆತಕ್ಕೆ ಪರಿಣಾಮಕಾರಿಯಾದ ಔಷಧವಾಗಿದೆಯೆಂದು ಪರಿಗಣಿಸಲಾಗಿದೆ. ಮತ್ತು ಕೀಲುಗಳ ಉರಿಯೂತದ ರೋಗಕ್ಕೆ, ಸಂಧಿವಾತಕ್ಕೆ ಹಾಗೂ ಪಕ್ಷವಾಯುವಿಗೆ ಔಷಧಿಯಾಗಿ ಕೊಡಲಾಗುತ್ತದೆ ಎನ್ನುವವಿವರಕ್ಕೆ: Thakur, R.S., Puri, H.S. and Husain, A.1989. http://www.celastrus.com ನೋಡಿರಿ.

ಮೂಲ: *Honey Bee Vol 20(4)-21(1) October 2009 to March 2010*

ಹೆಗಲ ಬಾವಿಗೆ ಕಣಗಲ ಚಿಕಿತ್ಸೆ

ಹಿಮಾಚಲ ಪ್ರದೇಶದ, ಕಾಂಗ್ರಾ ಜಿಲ್ಲೆಯ, ಪಯರ್‌ಚಂದ್‌ರವರು ಹಸುಗಳಲ್ಲಿ ಕಾಣಿಸಿಕೊಳ್ಳುವ ಹೆಗಲ ಬಾವಿಗೆ ಕಣಗಲು (*Nerium oleander L.*) ಗಿಡವನ್ನು ಉಪಯೋಗಿಸಿಕೊಂಡು ಚಿಕಿತ್ಸೆಯನ್ನು ನೀಡುತ್ತಾರೆ.

ಹೆಗಲ ಮೇಲೆ ಭಾರವಾದ ನೊಗದ ನಿರಂತರ ಉಜ್ಜುವಿಕೆಯ ಪರಿಣಾಮ ದಿಂದ ಹೆಗಲ ಬಾವು ಸಾಮಾನ್ಯವಾಗಿ ಉಂಟಾಗುತ್ತದೆ. ಇದು ಸೋಂಕಿನಿಂದ ಹಾಗೂ ನೋವಿನಿಂದ ಕೂಡಿರುತ್ತದೆ. ಇದರ ಚಿಕಿತ್ಸೆಗಾಗಿ ಪಯರ್‌ಚಂದ್‌ರವರು ಕಣಗಲು ಗಿಡದ ಎಲೆಗಳ ಮತ್ತು ತೊಗಟೆಯ ಲೇಪನ ತಯಾರಿಸಿ ಬಾವಿನ ಮೇಲೆ ದಿನಕ್ಕೆ ಎರಡು ಬಾರಿಯಂತೆ ಮೂರು ದಿನಗಳವರೆಗೆ ಹಚ್ಚುತ್ತಾರೆ. ಈ ಮೂಲಕ ಹಸುವಿನ ಹೆಗಲಬಾವಿಗೆ ಪರಿಹಾರ ಕಂಡುಕೊಂಡಿರುವರು.



ವೈಜ್ಞಾನಿಕ ಹಿನ್ನೆಲೆ: ಕಣಗಲನ್ನು ಉರಿಬಾವು ಮತ್ತು ಚರ್ಮದ ಕಾಯಿಲೆಗಳಿಗೆ ಉಪಯೋಗಿಸ ಲಾಗುತ್ತದೆಯೆಂದು ಈಗಾಗಲೇ ತಿಳಿದುಬಂದಿದೆ. ವಿವರಕ್ಕೆ: Zargari. (1992); Medicinal plants, Volume 3(5): Page 889 ನೋಡಿರಿ.

ಕಣಗಲು ಎಲೆಗಳಿಂದ ತಯಾರಿಸಿರುವ ಕಷಾಯವನ್ನು ಗಾಯಗಳಲ್ಲಿನ ಕ್ರಿಮಿ ಕೀಟಗಳನ್ನು ನಾಶಮಾಡಲು ಉಪಯೋಗಿಸಲಾಗುತ್ತಿದೆ ಎನ್ನುವ ವಿವರಕ್ಕೆ: http://www.eol.org ನೋಡಿರಿ. ಅಲ್ಲದೆ ಈ ಗಿಡವು ಉರಿಶಮನ ಮಾಡುವಂತ ಮತ್ತು ಕ್ರಿಮಿನಾಶಕ ಗುಣಗಳನ್ನು ಹೊಂದಿದೆ. ವಿವರಕ್ಕೆ: Ahmed B.A., Sulayman K.D., Aziz A.A., Abd A.A. and Rashan L.J. (1993) ನೋಡಿರಿ. ಹನಿ ಬೀ ಸಂಚಿಕೆಗಳಾದ 3(3 & 4): 19, 1992; 9(1): 10, 1998; 11(2): 13, 2000ರಲ್ಲಿ ಈ ಅನುಶೋಧನೆಗೆ ಸಂಬಂಧಪಟ್ಟ ಹಲವು ಲೇಖನ ಗಳನ್ನು ಕೊಡಲಾಗಿದೆ.

ಜಂತು ಔಷಧವಾಗಿ ಕುಂಕುಮದ ಮರ

ಹಿಮಾಚಲ ಪ್ರದೇಶದ, ಕಾಂಗ್ರಾ ಜಿಲ್ಲೆಯ ಧನ್‌ರವರು ದನಕರುಗಳಿಗೆ ಜಂತು ನಿವಾರಕ ಔಷಧವಾಗಿ ಕುಂಕುಮದ ಮರ *(Mallotus philippensis (Lam.) Mull-Arg.)* ವನ್ನು ಉಪಯೋಗಿಸುತ್ತಾರೆ. ಕುಂಕುಮ ಮರದ ಎಳೆಯ ಸಸಿಗಳಿಂದ ತಯಾರಿಸಲಾದ ಕಷಾಯವನ್ನು ಹಸುಗಳಿಗೆ ಮೇವಿನ ಜೊತೆಯಲ್ಲಿ ಕೊಡುತ್ತಾರೆ.

ವೈಜ್ಞಾನಿಕ ಹಿನ್ನೆಲೆ: ಕುಂಕುಮದ ಮರವು ಜಂತು ನಿವಾರಕ ಗುಣಗಳನ್ನು ಹೊಂದಿದೆ. ವಿವರಕ್ಕೆ: John B. G., Spiridoula A. and Stig M. T. (2006); Veterinary Parasitology Volume 139(4): pages 308-320 and Gerold and Hannah (2007); http://orgprints.org ಹಾಗೂ ಹನಿ ಬೀ ಸಂಚಿಕೆ 9(3) : 18, 1998 ರಲ್ಲಿ ನೋಡಿರಿ.


ಕಣ್ಣಿನಲ್ಲಿ ಆದ ಗಾಯಕ್ಕೆ ರಾಮಗುಳ್ಳ

ಹಿಮಾಚಲ ಪ್ರದೇಶದ, ಕಾಂಗ್ರಾ ಜಿಲ್ಲೆಯ ಎನ್.ಕ್ರಿಷ್ಣನ್ ಚಂದ್ರರವರು ಗಿಡ ಮೂಲಿಕೆಗಳನ್ನು ಉಪಯೋಗಿಸಿಕೊಂಡು ಚಿಕಿತ್ಸೆಯನ್ನು ನೀಡುತ್ತಾರೆ. ಇವರು ರಾಮಗುಳ್ಳ (*Solanum xanthocarpum Schrad & Wendl.*) ಸಸ್ಯವನ್ನು ಉಪಯೋಗಿಸಿಕೊಂಡು ಕಣ್ಣಿನಲ್ಲಿ ಆಗಿರುವಂತ ಗಾಯಕ್ಕೆ ಚಿಕಿತ್ಸೆಯನ್ನು ಕೊಡುತ್ತಾರೆ. ಈ ಗಿಡದಿಂದ ತಯಾರಿಸಿರುವ ಕಶಾಯವನ್ನು ದಿನಕ್ಕೆ ಎರಡು ಅಥವಾ ಮೂರು ಹನಿಗಳಂತೆ ಕಣ್ಣಿನಲ್ಲಿ ಹಾಕುತ್ತಾರೆ. ಈ ವಿಧಾನವನ್ನು ಗಾಯವು ವಾಸಿಯಾಗುವವರೆಗೂ ಅನುಸರಿಸುತ್ತಾರೆ.

ವೈಜ್ಞಾನಿಕ ಹಿನ್ನೆಲೆ: ಗಾಯದ ಸೋಂಕನ್ನು ಗುಣಪಡಿಸಲು ರಾಮಗುಳ್ಳವನ್ನು ಉಪಯೋಗಿಸಲಾಗುತ್ತಿದೆಯೆಂದು ಈಗಾಗಲೇ ತಿಳಿದುಬಂದಿದೆ. ವಿವರಕ್ಕೆ: Bisset and Mazars. (1984); J. Ethnopharmacol, Volume 2(1): Pages 1-24 ನೋಡಿರಿ. ಅಲ್ಲದೆ ಈ ಗಿಡವು ಸೂಕ್ಷ್ಮಾಣುಜೀವಿನಾಶಕ ಗುಣಗಳನ್ನು ಹೊಂದಿದೆ. ವಿವರಕ್ಕೆ: Salar and Suchitra (2009); African Journal of Microbiology Research, Volume 3(3): Pages 97-100 ನೋಡಿರಿ. ಮತ್ತು ಫಂಗಸ್ ನಾಶಕ ಗುಣಗಳು ಇವೆ. ವಿವರಕ್ಕೆ: Batra A., Jaiswal S., Mehta B.K. and Bokadia M. M. (1982); Plant Med Phytother, Volume 16: Pages 165-168 ನೋಡಿರಿ. ಹನಿ ಬೀ 9(3):17, 1998 ರಲ್ಲಿಯೂ ಇದರ ವಿವರಗಳನ್ನು ಕೊಡಲಾಗಿದೆ.

ಬಾಯಿ ಹುಣ್ಣಿಗೆ ಬೆಳ್ಳುಳ್ಳಿಯ ಉಪಯೋಗ

ಗುಜರಾತ್ ರಾಜ್ಯದ ಮೆಹಸಾನ ಜಿಲ್ಲೆಯ 60 ವರ್ಷದ ಬಚುಭಾಯಿ ಬಾಬಲ್ ದಾಸ್ ಪಟೇಲ್‌ರವರು ಏಳನೇಯ ತರಗತಿಯವರೆಗೆ ಓದಿದ್ದು, ಹಸುಗಳಲ್ಲಿ ಕಾಣಿಸಿಕೊಳ್ಳುವಂತಹ ಬಾಯಿ ಹುಣ್ಣಿಗೆ ಕೊಡುವ ಚಿಕಿತ್ಸಾ ವಿಧಾನವು ಹೀಗಿದೆ. ಇದಕ್ಕಾಗಿ ಅವರು 500ಗ್ರಾಂ.ಬೆಳ್ಳುಳ್ಳಿ (*Allium sativum L.*)ಯನ್ನು 100 ಮಿ.ಲೀ. ಹರಳೆಣ್ಣೆ (*Ricinus communis L.*)ಯೊಂದಿಗೆ ಸೇರಿಸಿ ಅರೆಯುತ್ತಾರೆ. ಈ ಮಿಶ್ರಣವನ್ನು ನಾಲಿಗೆಯ ಮೇಲೆ ಆಗಿರುವಂತಹ ಹುಣ್ಣುಗಳಿಗೆ ಲೇಪಿಸುತ್ತಾರೆ. ಈ ವಿಧಾನವನ್ನು ಹುಣ್ಣುಗಳು ಗುಣ ವಾಗುವವರೆಗೂ ಅನುಸರಿಸು ತ್ತಾರೆ.



ವೈಜ್ಞಾನಿಕ ಹಿನ್ನೆಲೆ: ಬೆಳ್ಳುಳ್ಳಿ ಯಲ್ಲಿರುವ ಔಷಧೀಯ ಗುಣ ಗಳು ಪದೇ ಪದೇ ಕಾಣಿಸಿಕೊಳ್ಳು ವಂತಹ ಈ ರೀತಿಯ ಬಾಹ್ಯ ಹುಣ್ಣುಗಳ ಚಿಕಿತ್ಸೆಗೆ ಪರಿಣಾಮ ಕಾರಿಯಾದ ಔಷಧಿಯಾಗಿದೆ. ವಿವರಕ್ಕೆ: Xie XL, Liu BJ, Yuan SH. (2004); Zhong Nan Da Xue Xue Bao Yi Xue Ban, Volume 29(3): pages 330-1 ರಲ್ಲಿ ನೋಡಿರಿ. ಹಾಗು ಹನಿ ಬೀ 15(2):15, 2004 ರಲ್ಲಿ ಈ ಕಾಯಿಲೆಗೆ ಸಂಬಂಧಪಟ್ಟ ಕೆಲವು ಲೇಖನಗಳನ್ನು ಕೊಡಲಾಗಿದೆ.

ಮೂಲ: *Honey Bee Vol 20(2) April - June 2009*

ಮತ್ತೋರ್ವ ಸಾಲುಮರದ ವ್ಯಕ್ತಿ: ಹಗರೆಸದಾಶಿವಯ್ಯ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಗರೆ ಗ್ರಾಮಸ್ಥರಾದ ಸದಾಶಿವಯ್ಯನವರು ಪರಿಸರದ ಸಂರಕ್ಷಣೆ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದ್ದು ಈ ಬಗ್ಗೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ರಾಷ್ಟ್ರೀಯ ಪರಿಸರ ಪ್ರಶಸ್ತಿ ಪುರಸ್ಕೃತರಾದ ಸಾಲು ಮರದ ತಿಮ್ಮಕ್ಕ ಹಾಗೂ ಚನ್ನರಾಯಪಟ್ಟಣದ ಸಾಲು ಮರದ ಅಶೋಕರವರಿಂದ ಪ್ರೇರಿತರಾಗಿ ಪರಿಸರದ ಉಳಿವಿಗಾಗಿ ದುಡಿಯುತ್ತಿದ್ದಾರೆ. ಎಂಟು ವರ್ಷಗಳಿಂದ ಇವರು ತಮಗೆ ಪಿತ್ರಾರ್ಜಿತವಾಗಿ ಬಂದಿರುವ ಮೂರು ಎಕರೆ ಜಮೀನಿನಲ್ಲಿ ಮಾವು, ತೆಂಗು,ಹುಣಸೆಯನ್ನು ಬೆಳೆಸಿದ್ದಾರೆ. ಅಲ್ಲದೆ ನರ್ಸರಿ ಮಾಡಿಕೊಂಡು ಸಸಿಗಳನ್ನು ಬೆಳೆಸಿ ಸರ್ಕಾರಿ ಕಛೇರಿಗಳ ಹತ್ತಿರ, ಶಾಲಾ, ಕಾಲೇಜು, ಆಸ್ಪತ್ರೆ ಇನ್ನು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಗಿಡಗಳನ್ನು ಉಚಿತವಾಗಿ ಬೆಳೆಸುತ್ತಿದ್ದಾರೆ.

ನೀರು ಇರುವ ಕಡೆ ಬೇಸಾಯ ಮಾಡುವುದು ಸುಲಭ. ಆದರೆ ಬೋರ್ ವೆಲ್, ಬಾವಿ ಇಲ್ಲದ ಜಮೀನಿನಲ್ಲಿ ಮರಗಿಡಗಳನ್ನು ಬೆಳೆಸುವುದು ತುಂಬಾ ಪ್ರಯಾಸದ ಕೆಲಸ. ಆದರೆ ಸದಾಶಿವಯ್ಯನವರು ತಮ್ಮ ಜಮೀನಿಗೆ ಸ್ವಲ್ಪ ದೂರದಲ್ಲಿರುವ ಕೆರೆಯಿಂದ ನೀರನ್ನು ಮೊದಲೆಲ್ಲಾ ಹೊತ್ತು ತಂದು ಗಿಡಮರಗಳಿಗೆ ಹಾಕುತ್ತಿದ್ದ ಇವರು ಈಗ ತಮ್ಮಲ್ಲಿರುವ ಎತ್ತುಗಳನ್ನು ಬಳಸಿಕೊಂಡು ಒಮ್ಮೆಲೇ ಹತ್ತು ಕೊಡ ನೀರನ್ನು ಸಾಗಿಸಿ ಉಣಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕಾಗಿ ಅವರು ನೊಗಕ್ಕೆ ಉದ್ದನೆಯ ದಪ್ಪ ಕಟ್ಟಿಗೆಯನ್ನು ಕಟ್ಟಿ ಅದಕ್ಕೆ ಮುಕ್ಕಾಲು ಅಡಿಗೊಂದರಂತೆ ಎರಡು ಇಂಚಿನ ಐದು ಮೊಳೆಗಳನ್ನು ಸ್ವಲ್ಪ ಆಳಕ್ಕೆ ಹೊಡೆದಿದ್ದಾರೆ. ಒಂದೊಂದು ಮೊಳೆಗೆ ಎರಡೆರಡು ಕೊಡಗಳನ್ನು ಹಗ್ಗ ಕಟ್ಟಿ ನೇತುಹಾಕುತ್ತಾರೆ. ಹೀಗೆ ತುಂಬಿದ ಹತ್ತು ಕೊಡಗಳನ್ನು ಈ ತರಹ ನೇರವಾಗಿ ಗಿಡಗಳ ಹತ್ತಿರ ಸಾಗಿಸಿ ಐದು ಜನರ ಕೆಲಸವನ್ನು ಒಬ್ಬರೇ ಮಾಡುವ ಈ ಸುಲಭ ವಿಧಾನವನ್ನು ಕಂಡು ಕೊಂಡಿದ್ದಾರೆ. "ಮೂರು ವರ್ಷಗಳವರೆಗೆ ಈ ಗಿಡಗಳಿಗೆ ನೀರು ಕೊಟ್ಟರೆ ಸಾಕು, ನೂರು ವರ್ಷ ನಮ್ಮನ್ನು ಕಾಪಾಡುತ್ತವೆ" ಎನ್ನುವ ಇವರದು ಛಲ ಗಾರಿಕೆಯ ಬದುಕು. ಹೊಟ್ಟೆಪಾಡಿಗಾಗಿ ಬ್ಯಾಂಕಿನಿಂದ ಸಾಲ ಪಡೆದು ಹಿಟ್ಟಿನ ಗಿರಣಿಯನ್ನು ಇಟ್ಟುಕೊಂಡಿದ್ದಾರೆ.

ತಾವು ಬೆಳೆಸಿದ ಗಿಡಗಳಿಂದ ಸಕಲ ಜೀವಿಗಳಿಗೂ ಉತ್ತಮ ಗಾಳಿ, ಆರೋಗ್ಯ ದೊರಕುವುದಲ್ಲದೇ ವಿಜ್ಞಾನದ ಬೆಳವಣಿಗೆಗೂ ಅನುಕೂಲವಾಗುತ್ತದೆ ಎನ್ನುವ ಇವರು, ಜೈವಿಕ ಇಂಧನದ ಉತ್ಪಾದನೆಗೆ ಬಳಕೆಯಾಗುವ ಗಿಡಗಳಾದ ಬೇವು, ಹೊಂಗೆ, ಸಿಮರುಬಾದ 1500ಕ್ಕೂ ಹೆಚ್ಚು ಗಿಡಗಳನ್ನು ಹಗರೆ ಆಸ್ಪತ್ರೆಯ ಆವರಣದಲ್ಲಿ ಬೆಳೆಸುತ್ತಿದ್ದಾರೆ. ಸರ್ಕಾರದಿಂದ ಹಾಗು ದಾನಿಗಳಿಂದ ಯಾವುದೇ ಅನುದಾನ, ಪ್ರತಿಫಲ ಅಪೇಕ್ಷಿಸದೆ ತಮ್ಮ ಸ್ವಂತ ದುಡಿಮೆಯ ಹಣವನ್ನು ಪರಿಸರ ಸಂರಕ್ಷಣೆಗಾಗಿ ವೆಚ್ಚ ಮಾಡುತ್ತಿದ್ದಾರೆ. ಗಿಡ ನೆಡುವ ಹಾಗು ಪರಿಸರದ ಜಾಗೃತಿ ಮೂಡಿಸುವಂತಹ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪರಿಸರದ ಬಗ್ಗೆ ಉಪನ್ಯಾಸ ನೀಡುತ್ತಾರೆ ಮತ್ತು ಸಸಿಗಳನ್ನು ಉಚಿತವಾಗಿ ವಿತರಿಸುತ್ತಾರೆ. ಸದಾಶಿವಯ್ಯನವರು ಹಗರೆಯಲ್ಲಿ ಶ್ರೀ ದೇವಿರಮ್ಮ ವನಸಿರಿ ಬಳಗ ಸ್ಥಾಪಿಸಿಕೊಂಡು ಸ್ವಚ್ಛ ಹಾಗು ಹಸಿರು ಪರಿಸರವನ್ನು ನಿರ್ಮಾಣ ಮಾಡುವ ಕನಸು ಹೊತ್ತು ಪರಿಸರಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಅನೇಕ ಸಂಘ, ಸಂಸ್ಥೆಗಳು ಗೌರವ ನೀಡಿ ಸನ್ಮಾನಿಸಿವೆ.

ಕೃಷಿಯಲ್ಲಿ ಸಂಗೀತಾರ ಸಾಧನೆ

ಸುಮಾರು ಎಂಟು ವರ್ಷಗಳಿಂದ ಸಾವಯವ ಕೃಷಿಯನ್ನು ಮಾಡುತ್ತಿರುವ ಸಂಗೀತಾ ಶರ್ಮರು ಮೂಲತಃ ಪಂಜಾಬಿನವರು. ಇವರು ತಮ್ಮ ಆರು ಎಕರೆಯ ಭೂಮಿಯಲ್ಲಿ ಹಲವಾರು ನಾಟಿ ತಳಿಯ ತರಕಾರಿಗಳು, ಸೊಪ್ಪುಗಳು, ಜೋಳ, ಗೋಧಿ, ಭತ್ತದಂತಹ ಧಾನ್ಯ ಬೆಳೆಗಳನ್ನು, ಹಲವಾರು ಹಣ್ಣಿನ ಗಿಡಗಳನ್ನು ಸಾವಯವವಾಗಿ ಬೆಳೆಸುತ್ತಿದ್ದಾರೆ. ಅನೇಕ ಔಷಧೀಯ ಸಸ್ಯಗಳೂ ಇವರ ತೋಟದಲ್ಲಿದೆ. ಇವರ ಬಳಿ 30 ತರಹದ ನಾಟಿ ಟೊಮೆಟೋ ತಳಿಗಳು, ಏಳು ಬಗೆಯ ಬದನೆಕಾಯಿ ತಳಿಗಳು, ಒಟ್ಟಿನಲ್ಲಿ 85 ತರಹದ ತರಕಾರಿ ಬೀಜಗಳನ್ನು ಸಂರಕ್ಷಣೆ ಮಾಡಿದ್ದಾರೆ. ಅನೇಕ ರೈತರನ್ನು ಭೇಟಿ ಮಾಡಿ ಅವರ ಬಳಿಯಿರುವ ನಾಟಿ ಬೀಜಗಳನ್ನು ಸಂಗ್ರಹಿಸಿ, ಅವುಗಳನ್ನು ಅಭಿವೃದ್ಧಿ ಮಾಡಿರುವುದಲ್ಲದೇ ಉಚಿತವಾಗಿ ರೈತರಿಗೆ ನೀಡುತ್ತಾರೆ. ಹೈದರಾಬಾದ್, ತಮಿಳುನಾಡು, ಕೇರಳ ಇನ್ನು ಹಲವಾರು ರಾಜ್ಯಗಳ ರೈತರಿಗೂ ಸಹ ಕೊಟ್ಟಿದ್ದಾರೆ.

ಅವರು ಹೇಳುವಂತೆ ನಾವು ಆ ಭೂಮಿಯ ಮಣ್ಣಿನ ಗುಣಗಳನ್ನು ಅರಿತು, ಆ ಮಣ್ಣಿಗೆ ಸಾವಯವವಾಗಿ ಉಪಚಾರವನ್ನು ಮಾಡಿದರೆ ಬೆಳೆಗಳಿಗೆ ಯಾವ ರೋಗವೂ ಬರಲಾರದು. ಅಲ್ಲದೇ ಇವರು ತಮ್ಮ ಜಮೀನನ್ನು ಬೆಳೆ ಬೆಳೆಯುವುದಕ್ಕಿಂತ ಮೊದಲು ದ್ವಿದಳ ಧಾನ್ಯದ ಸಸ್ಯಗಳನ್ನು ಮಣ್ಣಿನಲ್ಲಿ ಮಿಶ್ರಣಮಾಡಿ ನಂತರ ಜೀವಾಮೃತದಿಂದ ಉಪಚಾರ ಮಾಡುತ್ತಾರೆ. ಪ್ರತಿಸಲ ಒಂದೇ ರೀತಿಯ ಬೆಳೆಗಳನ್ನು ಹಾಕದೆ, ಉತ್ತಮ ಇಳುವರಿಗೆ ಬೆಳೆಗಳ ಬದಲಾವಣೆಯೂ ಒಂದು ಮುಖ್ಯ ಅಂಶ ಎನ್ನುವ ಇವರು ಬೆಳೆಗಳಿಗೆ ಬೇಕಾದಂತಹ ಸಾವಯವ ಗೊಬ್ಬರಗಳಾದ ಎರೆಹುಳು ಗೊಬ್ಬರ, ಜೀವಾಮೃತವನ್ನು ಸ್ವತಃ ತಯಾರಿಸಿಕೊಳ್ಳುತ್ತಾರೆ.

ಸಂಗೀತಾ ಅವರು "ಅನ್ನದಾನ" ಎನ್ನುವ ಸ್ವಯಂ ಸಂಸ್ಥೆಯ ನಿರ್ದೇಶಕರಾಗಿದ್ದು ನಾಟಿ ಬೀಜ ಹಾಗೂ ಮಣ್ಣಿನ ರಕ್ಷಣೆ ಕುರಿತು ಜಾಗೃತಿ ಮೂಡಿಸುವ ಕಾಯಕವನ್ನು ಈ ಸಂಸ್ಥೆಯು ಮಾಡುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಗೀತ ಶರ್ಮರವರನ್ನು 9448068347 ಕ್ಕೆ ಸಂಪರ್ಕಿಸಬಹುದು.

ಪ್ರತಿಕ್ರಿಯೆ

ಸಪ್ರೇಮ ವಂದನೆಗಳು. ಹಿತ್ತಲಗಿಡ ಚಾತುರ್ಮಾಸ್ಯ ಪತ್ರಿಕೆ ನನಗೆ ಹಿತ್ತಲಹಳ್ಳಿಗೆ ಆಗಾಗ ಬಂದು ನನ್ನ ಕೈ ಸೇರುತ್ತಿದೆ. ಆ ಬಗ್ಗೆ ಪತ್ರ ಬರೆಯಲೂ ಆಗಲಿಲ್ಲ, ಇದೀಗ ಬರೆಯುತ್ತಿದ್ದೇನೆ.

ಅದನ್ನು ಓದಿ ಬಹಳ ಸಂತೋಷ ಹೊಂದಿದ್ದೇನೆ. ಈ ಸೃಷ್ಟಿಯಲ್ಲಿ ಐವತ್ತು ಅಕ್ಷರಗಳು ಸೂರ್ಯನ ಪ್ರತಿನಿತ್ಯ ಹೊರಡುವ ಕಿರಣಗಳಿಂದ ಜಾಗ್ರತವಾದ ಆ ಅಕ್ಷರಗಳು ಮಾನವ ಶರೀರದಲ್ಲಿ ಬಾಹ್ಯವಾಗಿಯೂ ಅಂತರ್ಮುಖವಾಗಿಯೂ ಪ್ರಸವಿಸುತ್ತವೆ ಎಂದು ಮಹರ್ಷಿಗಳ ಸಂಶೋಧನೆಗಯಾಗಿದೆ. ಆ ಅಕ್ಷರವು ಯಾರಲ್ಲಿ ಬಾಹ್ಯವಾಗಿ ಕೆಲಸ ಮಾಡುತ್ತದೆಯೋ ಆತನು ಒಳ್ಳೇ ಮಾತನಾಡಬಲ್ಲನು. ಅಂತರ್ಮುಖವಾಗಿ ಕೆಲಸ ಮಾಡುತ್ತಿರುವ ಶಾರೀರಿಕನು ಒಳ್ಳೇ ಬರವಣಿಗೆ ಹೊಂದುವವನು. ಎರಡೂ ಮುಖ ಕೆಲಸ ಮಾಡದೇ ಇರುವ ಅಕ್ಷರಗಳು ಇದ್ದ ಶಾರೀರಿಕನು ಮೂಕನಾಗುವನು ಎಂದು ಶಾಸ್ತ್ರ ಸಾರುತ್ತದೆ. ಪ್ರಸ್ತುತಃ ತಮ್ಮ ಪತ್ರಿಕೆಯು ವಿಶ್ವ ನಿಸರ್ಗ ಶಕ್ತಿಯ ಸಸ್ಯಗಳ ವಿಚಾರ ಹೊಂದಿದ ಕಾರಣ ಸಾರ್ಥಕತೆ ಹೊಂದಿದೆ. ಇಷ್ಟಲ್ಲದೇ "ಏನಕೇನ ಪ್ರಕಾರೇಣಕೋಪಿ

ಮನುಜೀವತೀ ಪರೇಷಾ ಮುಪಕಾರೇಥ ಯಜ್ಜೀವತಿ ಸಜೀವತಿ'', ಎಂದಿದ್ದ ಮೂಲಕ ಸಜೀವಿಯಾಗಿ ಪರರಿಗೆ ಉಪಕಾರಕ್ಕಾಗಿ ಇರುವ ಲೇಖನವಾದ ಕಾರಣ ನೀವು ಸಜೀವಿಯಾಗಿ ಬದುಕಿದ್ದೀರಿ. ಮುಂದೂ ಸಜೀವಿಯಾಗಿಯೇ ಇರಲೆಂದು ಹಾರೈಸುತ್ತೇನೆ. (ಸಾರಾಂಶ: ತನ್ನ ಜೀವನ ನೆಡೆಸಿರುವವ ಜೀವಿ ಪರರಿಗೂ ಉಪಕಾರಮಾಡಿ ತಾನೂ ಬದುಕುವವ ಸಜೀವಿ.) ನಿಮ್ಮ ಪತ್ರಿಕೆಯು ಸಂಜೀವನಿಯಾಗಿ ಬಾಳಲೆಂದು ಮತ್ತೊಮ್ಮೆ ಹಾರೈಸುತ್ತೇನೆ. ಶುಭಂ

-ನಾಗೇಂದ್ರ ಅನಂತ ಭಟ್ಟ, ಜ್ಯೋತಿಷ್ಯಾಚಾರ್ಯ, ಹಿತ್ಲಳ್ಳಿ, ಯಲ್ಲಾಪುರ (ತಾ), ಉ.ಕ. (ಜಿಲ್ಲೆ)

ನಳಪಾಕ

ದಾಸರ ''ರಾಗಿ'' ಪದ

ರಾಗಿ ತಂದೀರ್‍ಯಾ ಬಿಕ್ಷಕೆ
ರಾಗಿ ತಂದೀರ್‍ಯಾ
ಯೋಗ್ಯ'ರಾಗಿ', ಬೋಗ್ಯ'ರಾಗಿ'
ಭಾಗ್ಯವಂತೆ'ರಾಗಿ' ನೀವು

ಮಾತಾಪಿತೃಗಳ ಸೇವಿಪ'ರಾಗಿ'
ನೀತಿ ಮಾರ್ಗದಲಿ ಖ್ಯಾತ'ರಾಗಿ'
ಗುರುಕಾರುಣ್ಯವ ಪಡೆದವ'ರಾಗಿ'
ಗುರುವಿನ ಪಾದವ ಸ್ಮರಿಸುವ'ರಾಗಿ'

ವೇದಪುರಾಣ ತಿಳಿದ 'ರಾಗಿ'
ಸಾಧು ಧರ್ಮಗಳಾಚರಿಸುವ 'ರಾಗಿ'
ಕಾಮ ಕ್ರೋಧವ ಅಳಿದವ 'ರಾಗಿ'
ನೇಮ ನಿತ್ಯವ ಮಾಡುವ 'ರಾಗಿ'

ಅನ್ನದಾನವ ಮಾಡುವ 'ರಾಗಿ'
ಕ್ರೂರರ ಸಂಗವ ಬಿಟ್ಟವ 'ರಾಗಿ'
ಪ್ರೇಮದಿ ಕುಣಿ ಕುಣಿದಾಡುವ 'ರಾಗಿ'
ಪುರಂದರ ವಿಠಲನ ಸೇವಿಪ 'ರಾಗಿ'

ರಾಗಿಯಲ್ಲಿನ ಅಗಾದ ಪೌಷ್ಠಿಕತೆ


100ಗ್ರಾಂ ರಾಗಿಯಲ್ಲಿ ಲಭ್ಯವಿರುವ ಪೌಷ್ಠಿಕಾಂಶಗಳನ್ನು ಕೆಳಗೆ ಕೊಡಲಾಗಿದೆ:

ಪ್ರೊಟೀನ್(7.3ಗ್ರಾಂ), ಕೊಬ್ಬು(1.3ಗ್ರಾಂ), ಲವಣ(2.7ಗ್ರಾಂ), ನಾರು (3.6ಗ್ರಾಂ), ಶರ್ಕರ (72.0ಗ್ರಾಂ), ಶಕ್ತಿ (328ಕ್ಯಾಲೊರಿ), ಕ್ಯಾಲ್ಸಿಯಂ (344ಮಿ.ಗ್ರಾಂ), ರಂಜಕ (283ಮಿ.ಗ್ರಾಂ), ಕಬ್ಬಿಣ (3.9ಮಿ.ಗ್ರಾಂ), ಕ್ಯರೋಟಿನ್ (42ಮಿ.ಗ್ರಾಂ), ಥಯಾಮಿನ್ (0.42ಮಿ.ಗ್ರಾಂ), ರೈಬೊಫ್ಲಾಮಿನ್ (0.19ಮಿ.ಗ್ರಾಂ), ನಿಯಾಸಿನ್ (1.1ಮಿ.ಗ್ರಾಂ), ಫೋಲಿಕ್ ಆ್ಯಸಿಡ್ (18.3ಮಿ.ಗ್ರಾಂ) ಸರಳವಾಗಿ ಹೇಳಬೇಕಾದರೆ

"ಒಮ್ಮೆ ರಾಗಿ ಮುದ್ದೆ ಊಟ ಮಾಡಿದಲ್ಲಿ ಮೂರು ಲೋಟ ಹಾಲು ಕುಡಿದಾಗ ಸಿಗುವಷ್ಟು ಕ್ಯಾಲ್ಸಿಯಂ ಅಂಶ ದೇಹಕ್ಕೆ ಸುಲಭವಾಗಿ ಸಿಗುವಂತಾಗುತ್ತದೆ."

ಮಿಶ್ರಕೃಷಿ -ಮೌಲ್ಯವರ್ಧನೆ-ನೇರ ಮಾರುಕಟ್ಟೆ: ಎಸ್.ಎಂ.ಪಾಟೀಲರ ಮಾದರಿ

ಲೇ: ಲೀಲಾ ನಾ. ಕೌಜಗೇರಿ, ಬೆಲೆ: ರೂ.20 (ಅಂಚೆ ವೆಚ್ಚ ಪ್ರತ್ಯೇಕ)
ಪ್ರಕಾಶನ: ಕೃಷಿ ಮಾಧ್ಯಮ ಕೇಂದ್ರ, ಧಾರವಾಡ



ಬೆಳಗಾವಿ ಜಿಲ್ಲೆಯ ಅಥಣಿಯ ಎಸ್.ಎಂ. ಪಾಟೀಲರು ತಮ್ಮ 58 ವರ್ಷಗಳನ್ನು ಸರಕಾರಿ ಸೇವೆಯಲ್ಲಿ ಕಳೆದು 10 ವರ್ಷಗಳ ಹಿಂದೆ ಸೇವೆಯಿಂದ ನಿವೃತ್ತಿ ಹೊಂದಿದಾಗ ಅವರ ಮನದಲ್ಲಿದ್ದ ಒಂದೇ ಯೋಚನೆ ಆದಷ್ಟು ಬೇಗನೆ ಒಕ್ಕಲುತನಕಿಳಿಯ ಬೇಕು ಎಂಬುದಾಗಿ. ಹಾಗಾಗಿ ಅವರು ಹತ್ತಾರು ಕಡೆ ಓಡಾಡಿ ಸಾವಯವ ಕೃಷಿಕರ ಪ್ರಯೋಗ ಗಳನ್ನು ಕೂಲಂಕುಷವಾಗಿ ನೋಡಿ, ಅವರ ಅನುಭವ ಗಳಿಗೆ ಕಿವಿಗೊಟ್ಟು ತಮ್ಮ ಕೃಷಿ ಕಾಯಕಗಳನ್ನು ಪ್ರಾರಂಭಿಸಿದ್ದಾರೆ. ಅವರ ಮನಸ್ಸು-ಕೃಷಿ-ಬದುಕು ಎಲ್ಲವೂ ಈಗ ಸಾವಯವವಾಗಿದೆ. ಒಕ್ಕಲುತನವು ಇವರಿಗೆ ಖುಷಿ, ನೆಮ್ಮದಿಯನ್ನು ತಂದುಕೊಟ್ಟಿದೆ. ನಾನಾ ಬೆಳೆಗಳನ್ನು ಬೆಳೆಯುವುದು ಮಾತ್ರವಲ್ಲದೆ, ಪ್ರತಿಯೊಂದರಿಂದ ಬಗೆಬಗೆಯ ಮೌಲ್ಯವರ್ಧಿತ ಉತ್ಪನ್ನ ತಯಾರಿಸಿರುವರು. ಹಾಗೇ, ಸದಾ ಹೊಸಹೊಸ ಪ್ರಯೋಗ, ನೇರ ಮಾರುಕಟ್ಟೆ, ಸಂಘಟನೆಯ ಮೂಲಕ ಸಾವಯವ ಚಳವಳಿಯ ಬಲವರ್ಧನೆಗೊಳಿಸಿರುವರು. 2003 ರಲ್ಲಿ ಅಥಣಿ ತಾಲ್ಲೂಕು ''ಸಾವಯವ ಕೃಷಿಕರ ಸಂಘ ''ಸ್ಥಾಪಿಸಿದ್ದಾರೆ. ಮನೆಯಿಂದಲೇ ಕಾರ್ಯ ನಿರ್ವಹಣೆ. ಆರಂಭವಾದಾಗ ಇದ್ದ ಸದಸ್ಯರು ಕೇವಲ ಏಳು ಮಂದಿ. ಈಗ 183 ಮಂದಿ ಸದಸ್ಯರು. ಅವರಲ್ಲಿ 80 ರೈತರು ಪೂರ್ಣಪ್ರಮಾಣದಲ್ಲಿ ಸಾವಯವ ಕೃಷಿ ಮಾಡುತ್ತಿದ್ದಾರೆ.

ಇವರ ಮೌಲ್ಯವರ್ಧಿತ ಉತ್ಪನ್ನಗಳಾದ ನೈಸರ್ಗಿಕ ಕುಂಕುಮ, ಅರಿಶಿಣ ಪುಡಿ, ಕ್ರಿಯಾಭಸ್ಮ ಗಟ್ಟಿ ಚಿಕ್ಕು ಜಾಮ್, ಚಿಕ್ಕು ಮಸಾಲ ಅಡಿಕೆ, ಚಿಕ್ಕು ಒಣ ಹಣ್ಣು ಚಿಕ್ಕು ಉಪ್ಪಿನಕಾಯಿ, ಮಾಕಂದಿ ಬೇರು ಉಪ್ಪಿನಕಾಯಿ, ಚಿಕ್ಕು ಚಾಕಲೇಟ್, ಚಿಕ್ಕು ಶಕ್ತಿವರ್ಧಕ ಚೂರ್ಣ, ಸುಗಂಧವರ್ಧಕ ಸೊಳ್ಳೆಬತ್ತಿ, ಗೋಮಯಯುಕ್ತ ಸಾಬೂನು, ನೇತ್ರರಕ್ಷಕ, ದಂತಮಂಜನ, ಪಾಚಕ ಚೂರ್ಣ, ಕಷಾಯ ಚೂರ್ಣ, ಕರಿಬೇವು ಸೊಪ್ಪಿನ ಚೂರ್ಣ, ಗೋಮೂತ್ರಯುಕ್ತ ಫಿನೈಲ್, ಭಟ್ಟಿ ಇಳಿಸಿದ ಗೋಮೂತ್ರ, ಗೋಧಿ ಬೀಜಾಂಕುರ ಚೂರ್ಣ, ಜವಾರಿ ಟೊಮೆಟೋದ ಸಾಸ್, ರೆಡಿಮೇಡ್ ಶರಬತ್ತು, ಮುಖಕ್ಕೆ ಹಚ್ಚುವ ಪೌಡರ್, ಸಾರಿನಪುಡಿ, ಶೇಂಗಾ-ಗುರೆಳ್ಳು-ಅಗಸಿ ಚಟ್ನಿ, ಕಾಕಡೆ (ಗೋಧಿ ಹಪ್ಪಳ)- ಹೀಗೆ ಪಾಟೀಲ್ ಕುಟುಂಬದ ಮೌಲ್ಯವರ್ಧನೆಯ ಉತ್ಪನ್ನಗಳು ಹಲವು. ಎಲ್ಲ ಉತ್ಪನ್ನಗಳಿಗೂ ಸಾವಯವ ದೃಢೀಕರಣ ಪ್ರಮಾಣಪತ್ರ ಸಿಕ್ಕಿದೆ.

ಪಾಟೀಲರ ಈ ಅನುಭವವನ್ನು ಧಾರವಾಡದ ಕೃಷಿ ಮಾಧ್ಯಮ ಕೇಂದ್ರ ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಈ ಪುಸ್ತಕವನ್ನು ಕಾಮ್ ಫೆಲೋ ಲೀಲಾ ಕೌಜಗೇರಿ ಬರೆದಿದ್ದಾರೆ.ಆಸಕ್ತರು ಎಸ್.ಎಂ. ಪಾಟೀಲರನ್ನು ವಿದ್ಯಾನಗರ, ಅಥಣಿ, ಬೆಳಗಾವಿ ಜಿಲ್ಲೆ - 591 304, ಫೋನ್ - 08289 251582; 9448432172 ಸಂಪರ್ಕಿಸಬಹುದು.

ಹಿತ್ತಲಗಿಡದ ಚಂದಾ ವಿವರ

ವಿಂಗಡಣೆ	ವಾರ್ಷಿಕ	ಆಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕರ ವಂತಿಕೆ ಪಡೆಯಲಾಗುವುದು)

ಚಂದಾ ಹಣವನ್ನು ಅಂಚೆ (M.O.) ಅಥವಾ '*ಸಂಪಾದಕರು, ಹಿತ್ತಲಗಿಡ, ಬೆಂಗಳೂರು*' ಈ ಹೆಸರಿನ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Subscription Rates for *Honey Bee*

Category	South Asia* (Indian Rs.)	International (US $ Dollar)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1,000 Institution	60

** Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/cheque in favour of **A/c Sristi Innovations** at the editorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927,
Email : honeybee@sristi.org;

Printed by M/s Replica Offset Printers, Industrial Town, Rajajinagar, Bangalore - 560 044
Published by Sri K. G. Priyadarshi (Owner) at No.399, 14-B Cross, New Town Yelahanka, Bangalore-560 106,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಏಳನೆ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 10,000 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ವ್ಯಕ್ತಿ ಹಾಗು ಸಂಸ್ಥೆಗಳಿಗೆ 50,000, 25,000 ಮತ್ತು 10,000ಗಳ ಮೂರು ವಿಶೇಷ ಬಹುಮಾನಗಳಿವೆ. ಹಾಗೇ, ರಾಜ್ಯ ಮಟ್ಟದಲ್ಲೂ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು **ರಾಷ್ಟ್ರೀಯ ದಾಖಲಾತಿ ಪುಸ್ತಕ** **(National Register)**ದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಮಾಡುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯೀಕರಣಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು **'ಪೂರ್ವ ಸೂಚಿತ ಸಮ್ಮತಿ'** (Prior Informed Consent) ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡುತ್ತಿದ್ದಾರೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು, ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಏಳನೆ ಸ್ಪರ್ಧೆಗೆ ಡಿಸೆಂಬರ್ 2010ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು 'ಹಿತ್ತಲಗಿಡ' ಅಥವಾ National Coordinator, National Innovation Foundation, Bungalow No.1 Satellite Complex, Permchand Nagar Road, Ahmedabad - 380015 Gujarat. e-mail : campaign@nifindia.org ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ಪುಸ್ತಕ ಅಂಚೆ

ಗೆ, ...

ಇವರಿಗೆ

ಡಾ.ಟಿ. ಎಸ್. ಪ್ರಕಾಶ್ ಕಮ್ಮರಡಿ
ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtnk@yahoo.com